ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ, ಸಂಚಿಕೆ ೪ಟ - ಅಕ್ಟೋಬರ್ ೨೦೨೩



ಶ್ರಾವಣ ಸಂಧ್ಯಾ

KARNATAKA CULTURAL ORGANIZATION BRINDAVANA (KCOB) NJ, USA

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

ಪರಿವಿಡಿ

ಅಧ್ಯಕ್ಷರ ಅಪೂರ್ವ ಅಂಕಣ.....೪

ನಂಬಿಕೆ.....೭

ಹಿನ್ನೋಟ.....೧೦

ಬರಹಗಳು.....೧೫

ಪ್ರವಾಸ ಕಥನ.....೩೧

ಕವನಗಳು..... ೪೦

ಹಾಸ್ಯಾಭಿಪ್ರಾಯ.....೪೪

ಕ್ಯಾಮೆರಾ ಕಣ್ಣು..... ೪೮

ಚಿಣ್ಣರ ಮುತ್ತುಗಳು.....೫೧

ಸಂಪಾದಕೀಯ

ನಮ್ಮ ದೇಶದ ಜ್ಞಾನಪರಂಪರೆಯು ಕೇವಲ ವೇದಶಾಸ್ತ್ರದ ಪುಸ್ತಕಗಳಲ್ಲದೆ ನಾವು ಆಚರಿಸುವ ಹಬ್ಬ, ವ್ರತ, ಪರ್ವ, ಉತ್ಸವ ಹಾಗು ಇನ್ನಿತರ ಆಚರಣೆಗಳಲ್ಲಿ ನೋಡಬಹುದು . ವರ್ಷದಲ್ಲಿನ ಹನ್ನೆರಡು ಮಾಸಗಳಲ್ಲೂ ಶ್ರಾವಣ-ಭಾದ್ರಪದ ಮಾಸಗಳ ಹಬ್ಬಗಳು ವಿಶೇಷವಾದದ್ದು. ಭೀಮನ ಅಮಾವಾಸ್ಯೆಯಿಂದ ಶುರುವಾಗಿ ಅನಂತ ಚತುರ್ಥಿಯವರೆಗೂ ಒಂದಾದಮೇಲೊಂದು ಮತ್ತೊಂದು ಅಂತ ಹಬ್ಬಗಳ ಸಾಲೇ ಸಾಲು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ವರಮಹಾಲಕ್ಷ್ಮಿ ವ್ರತ, ಗೌರಿ ಗಣೇಶ ಹಬ್ಬ, ಗೋಕುಲಾಷ್ಟಮಿ, ಅನಂತ ಚತುರ್ಥಿ ಮುಂತಾದವುಗಳು...

ಪ್ರತಿವರ್ಷದ ಹಾಗೆ ಈ ಸಂವತ್ಸರವೂ ನಮ್ಮ ಬೃಂದಾವನದಲ್ಲಿ ಗಣೇಶೋತ್ಸವದ ಸಡಗರ. ಏನೆಂದು ವರ್ಣಿಸಲಿ ಆ ಸುಂದರ ಸಮಾರಂಭವನ್ನು, ಎತ್ತ ನೋಡಿದರೂ ಹಬ್ಬದ ಸಂಭ್ರಮ. ರಂಗು ರಂಗಿನ ಉಡುಗೆತೊಟ್ಟ ನಮ್ಮ ಕನ್ನಡ ಬಂಧುಗಳು, ಅವರ ಇರುವಿಕೆಯೇ ಆ ದಿನ ಒಂದು ಮೆರುಗುತಂದಿತ್ತು. ಮುಂಜಾನೆ ದೀಪಬೆಳಗಿ ಪ್ರಾರಂಭವಾದ ಕಾರ್ಯಕ್ರಮಗಳು ಸಂಜೆಯವರೆಗೂ ಸಾಗಿ ನಮ್ಮೆಲ್ಲರಲ್ಲಿ ಹೊಸ ಚೈತನ್ಯ ಮೂಡಿಸಿತು ಎಂದರೆ ತಪ್ಪಾಗಲಾರದು. ವಿನಾಯಕ ಜೋಶಿ ಬಳಗದಿಂದ ನಡೆದ ಸ್ಟಾಂಡ್ ಅಪ್ ಕಾಮಿಡಿ ಶೋ ಎಲ್ಲರನ್ನು ಹೊಟ್ಟೆಹುಣ್ಣಾಗಿಸುವಷ್ಟು ನಗಿಸಿ ನಮೆಲ್ಲರನ್ನು ಮಹದಾನಂದಲ್ಲಿ ತೇಲುವಂತೆ ಮಾಡಿದ್ದು ಒಂದು ಆಕರ್ಷಣೆಯಾದರೆ ಬೀಟ್ ಗುರುಸ್ ನ ಬೀಟ್ಸ್ ಗೆ ಹೆಜ್ಜೆ ಹಾಕುವಂತೆ ಮಾಡಿದ ಅವರ ಅಮೋಘವಾದ ಸಂಗೀತ, ತಾಳ ಮೇಳಗಳೊಳಗೊಂಡ ಮತ್ತೊಂದು ಆಕರ್ಷಣೆ. ಸಣ್ಣ ವಯಸ್ಸಿನ ಮಕ್ಕಳಿಂದ ಹಿಡಿದು ದೊಡ್ಡವರ ವರೆಗೂ ಎಲ್ಲರೂ ಕುಣಿದು ಕುಪ್ಪಳಿಸಿದ ಆ ಕ್ಷಣಗಳು ಅದ್ಭುತ. ಈ ಎಲ್ಲ ಕಾರ್ಯಕ್ರಮಗಳ ಜೊತೆಯಲಿ ಒಳ್ಳೆ ಹಬ್ಬದ ಊಟವನ್ನು ಉಣಬಡಿಸಿ ನಮಗೆಲ್ಲ ಹಬ್ಬದ ವಾತಾವರಣ ಸೃಷ್ಟಿಮಾಡಿದ್ದು ಮರೆಯಲು ಸಾಧ್ಯವೇ!

ಇನ್ನು ನಮಗೆಲ್ಲಾ ಗೊತ್ತಿರುವ ಹಾಗೆ ಚಂದ್ರಯಾನ-೩ರ ಯಶಸ್ಸಿನೊಂದಿಗೆ ಭಾರತವು ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿದ ಮೊದಲ ದೇಶವಾಗಿದೆ. ಇದು ವಿಶ್ವದ ಎಲ್ಲಾ ಭಾರತೀಯರಿಗೂ ಹೆಮ್ಮೆಯ ಸಂಗತಿ! ಚಂದ್ರಯಾನ ೩ ರ ಜೊತೆಗೆ ಈ ಬಾರಿ ಭಾರತವು ೧೮ನೆ G20 ಶೃಂಗಸಭೆಯನ್ನು ಆಯೋಜಿಸಿರುವುದು ನಮಗೆಲ್ಲ ಮತ್ತೊಂದು ಸಂತಸದ ವಿಷಯ. ಸಭೆಯ ಹೈಲೈಟ್ ಎಂದರೆ ಮಹಿಳೆಯರಿಗೆ ಪ್ರತ್ಯೇಕವಾದ ಬಿಲ್ ಒಂದನ್ನು ಸೂಚಿಸಿರುವುದು ಹಾಗೂ ಮಹಿಳೆಯರ ಸಬಲೀಕರಣದ ಕುರಿತು ಕಾರ್ಯನಿರತ ಗುಂಪನ್ನು ರಚಿಸಲು ನೇತಾರರು ಒಪ್ಪಿಕೊಂಡಿರುವುದು. ಅಧ್ಯಕ್ಷರ ಸಮಿತಿಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಲಿಂಗ ಸಮಾನತೆ, ಮಹಿಳಾ ಸಬಲೀಕರಣ ಮತ್ತು ಮಹಿಳಾ ನೇತೃತ್ವದ ಅಭಿವೃದ್ಧಿಯ ಬಗ್ಗೆ ವಿಶೇಷ ಕಾಳಜಿ ವ್ಯಕ್ತಪಡಿಸಿದೆ. ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸುತ್ತಿರುವ ಪ್ರಪಂಚದ ಬೇರೆಲ್ಲಾ ದೇಶಗಳು ನಿಬ್ಬೆರಗಾಗಿ ಭಾರತದತ್ತ ನೆಲೆಯುತ್ತಿದೆ ಎಂದರೆ ತಪ್ಪಾಗಲಾರದು!

ನಮ್ಮ ಅನುಭವಗಳಿಗೆ ಮಿತಿಯೇ ಇಲ್ಲ, ಸಾಧನೆಗಳಿಗೆ ಕೊನೆಯೇ ಇಲ್ಲ. ಬನ್ನಿ ಎಲ್ಲರೂ ನಮ್ಮ ಈ ವರ್ಷದ ಹಬ್ಬಗಳನ್ನು, ನಮ್ಮ ದೇಶದ ಸಾಧನೆಗಳನ್ನು ಮೆಲುಕು ಹಾಕುತ್ತಾ ಹೊಸ ಋತುವನ್ನು ಬರಮಾಡಿಕೊಳ್ಳೋಣ.

ಸಂಪಾದಕ ವರ್ಗದ ಪರವಾಗಿ,
ಧನ್ಯವಾದಗಳೊಂದಿಗೆ,
ಪವಿತ್ರಾ ರಾಜೀವ್

ಸಂಪಾದಕ ವರ್ಗ:

ಉಷಾ ಗಣಪತಿ

ಕೆ.ರಾಘವೇಂದ್ರ

ಪವಿತ್ರಾ ರಾಜೀವ್

ಚಂದ್ರ

ಗಾಯತ್ರಿ

ವಿನಯ್

ಅಧ್ಯಕ್ಷರ ಅಪೂರ್ವ ಅಂಕಣ

ಬೃಂದಾವನದ ಬಂಧು ಬಾಂಧವರೆಲ್ಲರಿಗೂ ನಮಸ್ಕಾರ ನಮಸ್ಕಾರ ನಮಸ್ಕಾರ!

ಮೊನ್ನೆ ಮೊನ್ನೆಯಷ್ಟೇ, "ಕಾಲವನ್ನು ತಡೆಯೋರು ಯಾರು ಇಲ್ಲ" ಅಂತ ನೆನಪು ಮಾಡುತ್ತಾ ಬೃಂದಾವನ ವಾಣಿಯ ಅಂಕಣವನ್ನು ಪ್ರಾರಂಭಿಸಿದ್ದ. ಇಷ್ಟು ಬೇಗ ಇನ್ನೊಂದು ಸಂಚಿಕೆ ಬಿಡುಗಡೆಯಾಗಲು ಸಿದ್ಧತೆ ನಡೆಯುತ್ತಿದೆ ಅಂದರೆ, ಖಂಡಿತ "Time and tide wait for none " ಎಂದು ನಾವು ಮನವರಿಕೆ ಮಾಡಿಕೊಳ್ಳಬೇಕು.

ಕಳೆದ ವಾಣಿ ಸಂಚಿಕೆ ಬಿಡುಗಡೆಯಾದ ಸಮಯದಿಂದ ಇವತ್ತಿನವರೆಗೆ ನಿಮ್ಮಲ್ಲಿ ಕೆಲವರನ್ನು ಸಾಮಾಜಿಕ ಮಾಧ್ಯಮಗಳಿಂಳಗೆ ಈ-ಬೃಂದಾವನದಲ್ಲಿ, ಈ-ಮುಖೇನ; ಮತ್ತು ಕೆಲವರನ್ನು ಈ ಬೃಂದಾವನದಲ್ಲಿ ಮುಖತಃ ; ಇನ್ನುಳಿದವರನ್ನೆಲ್ಲ ಭಾರತದಲ್ಲೂ ಭೇಟಿಯಾಗಿದ್ದೇನೆ. ಎಲ್ಲಿದ್ದರೂ ಸರಿ, ಬೃಂದಾವನಿಗರ ಪ್ರೀತಿ ವಿಶ್ವಾಸಕ್ಕೆ ಆಭಾರಿಯಾಗಿ, ಈ ಸಲ ಈ-ಅಂಕಣದಲ್ಲಿ "ಏನು ಬರೆಯಬೇಕು" ಎಂದು ತೋಚದಿದ್ದರೂ, ಈ-ಬೃಂದಾವನದಲ್ಲಿ ನಿಮ್ಮ ಜೊತೆ ಸಂಭಾಷಿಸಲು, "ನಿಮ್ಮಲ್ಲಿ ಎಲ್ಲವೂ ಕುಶಲವೇ, ಕ್ಷೇಮವೇ, ಸೌಖ್ಯವೇ ?" ಎಂದು ಕೇಳಲು ಸಂತೋಷವಾಗುತ್ತಿದೆ.

'ನಾವು ಸಂತೋಷವಾಗಿದ್ದರೆ ಆರೋಗ್ಯವಾಗಿರುತ್ತೇವೆ. ಅಥವಾ, ನಾವು ಆರೋಗ್ಯವಾಗಿದ್ದರೆ ಸಂತೋಷವಾಗಿರುತ್ತೇವೆ', ಇರಬೇಕು ಅಲ್ವಾ?. ಯೋಚನೆ ಮಾಡುವಂತದ್ದೇ. ನನ್ನ ಆರೋಗ್ಯಕ್ಕಾಗಿ ನಾವು ಏನು ಮಾಡಿದ್ದೇನೆ? ಮಾಡುತ್ತಿದ್ದೇನೆ? ಮಾಡುತ್ತೇನೆ? ಎಂದು ಯೋಚನೆ ಮಾಡಿದೆ.

ಹಲವು ವರ್ಷಗಳ ಹಿಂದೆ, ನನ್ನ ಅಜ್ಜಿ " ತ್ರಾಣ ಇಲ್ಲ ಮಗ; ಮೈ, ಕೈ ಎಲ್ಲ ಮಾತಾಡ್ತಾ ಉಂಟು" ಅಂತ ಅಂದದ್ದೂ, ಅದಕ್ಕೆ ನಾನು "ನೀವು ಮೈ ಕೈ ಹೇಳಿದ್ದೆಲ್ಲ ಕೇಳಬೇಡಿ" ಅಂತ ಅಂದದ್ದೂ ನೆನಪಾಯಿತು. ನನಗೆ ಆಗೇನು ಮಹಾ ಗೊತ್ತಿರಲಿಲ್ಲ. ಈಗ ನಾನು ಕೆಲಸ ಮಾಡುವ ರೀಹ್ಯಾಬ್-ಆಸ್ಪತ್ರೆಯಲ್ಲಿ ಎಲ್ಲರನ್ನು ನೋಡುವಾಗ ಅಜ್ಜಿ ಏನು ಹೇಳಿರಬಹುದು ಎಂದು ಸ್ವಲ್ಪ ಮನವರಿಕೆ ಆಗುತ್ತಿದೆ.
ಆದರೂ "Time and tide wait for none " ಎಂದು ತಿಳಿದೂ ತಿಳಿಯದಂತೆ, "ನಾಳೆಯಿಂದ ಯೋಗಾಭ್ಯಾಸ ಮಾಡುತ್ತೇನೆ; ನಾಳೆಯಿಂದ ಪೌಷ್ಟಿಕ ಆಹಾರ ಸೇವಿಸುತ್ತೇನೆ" ಅಂತ ವಿನಾಕಾರಣ ಕಾರಣ ನೀಡುತ್ತಾ, ಕಾಲಚಕ್ರ ತಿರುಗುತ್ತಿದ್ದಂತೆಯೇ, ನಾನೂ ಕಾಲಹರಣ ಮಾಡುತ್ತಾ ಕಾಲ ಕಳೆದಿದ್ದೇನೆ.

ಹೀಗೆಯೇ ಆತ್ಮಾವಲೋಕನ ಮಾಡಿ, ಬೃಂದಾವನದಲ್ಲಿ ಎಲ್ಲರೂ ಸಂತೋಷವಾಗಿರಬೇಕು, ಆರೋಗ್ಯಕರವಾಗಿರಬೇಕು ಎಂಬ ಉದ್ದೇಶದಿಂದ ಹಲವು ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದ್ದೇವೆ.

ಬೃಂದಾವನ ವನವಿಹಾರದಂದು ಹೊಸಮುಖ, ಹಳೆ ಪರಿಚಯದಿಂದ ಚಿಗುರಿದ ಭಾಂದವ್ಯಗಳನ್ನು ಬೆಸೆಯುತ್ತಾ, ಕೆಲವರು ಹಬ್ಬ ಹರಿದಿನಗಳಲ್ಲಿ ಭೇಟಿಯಾಗಿ ಸಂತೋಷವಾಗಿದ್ದರೆ, ಇನ್ನುಳಿದವರು ನ್ಯೂ ಜೆರ್ಸಿಯ ವನಗಳಲ್ಲಿ ಹೈಕ್ ಮಾಡುತ್ತಾ ಪ್ರಕೃತಿಯ ಸೊಬಗನ್ನು ಆಸ್ವಾದಿಸುತ್ತ ಬಂದಿದ್ದಾರೆ. ಆರೋಗ್ಯ-ಬೃಂದಾವನದ ಪ್ರಕೃತಿ ಕ್ಲಬ್ ನಲ್ಲಿ, ಎಲ್ಲರಿಗನುಗುಣವಾಗಿ, ಪ್ರತಿ ವಾರದ ಹವಾಮಾನ ವರದಿಯನ್ನೂ, ಹಾಗೂ ನ್ಯೂ ಜೆರ್ಸಿಯ ಅಕ್ಕಪಕ್ಕದ ಎಲ್ಲಾ ಹೈಕಿಂಗ್ ಹಾದಿಗಳನ್ನೂ "ಅಧ್ಯಯನ" ಮಾಡಿ, ನಮ್ಮ ಪ್ರೀತಿಯ ಶ್ರೀಮತಿ ಹರಿತಾ ಭಾಸ್ಕರ್ ಹಾಗೂ ಶ್ರೀಮತಿ ಉಷಾ ಬಸ್ರೂರ್ ಅವರು ನಮಗೆ ನಿಸರ್ಗದ ಸೊಬಗನ್ನು ಸವಿಯಲು ಅನುವು ಮಾಡಿಕೊಟ್ಟಿದ್ದಾರೆ. ನಿಮ್ಮ ನೆರೆಕರೆಯ ಪಾರ್ಕ್ ಗಳಿಂದ ಹಿಡಿದು ಇತ್ತೀಚೆಗೆ ಮೌಂಟ್ ಟ್ಯಾಮನಿಯ, 1526 ಅಡಿಯ ತುತ್ತತುದಿಯಲ್ಲಿ ಕುಳಿತು ಪೆನ್ಸಿಲ್ವೇನಿಯದ ವರ್ಣರಂಜಿತ ಮರಗಳ ಸೊಬಗನ್ನು ನೋಡುವುದೇ ಹಬ್ಬ. ಸುಮಾರು 8-9 ತಿಂಗಳು ಈ ರೀತಿಯ ಹೈಕಿಂಗ್ ಮಾಡಿದ ಸಂತೋಷವು, ಆರೋಗ್ಯಕರವೆನಿಸಿತು.

ಇತ್ತೀಚೆಗೆ ಬೃಂದಾವನ ಚಾರಿಟಿಯ ಸಲುವಾಗಿ ಶಾಲಾ ಸಲಕರಣೆ ಗಳನ್ನು ಸಂಗ್ರಹಿಸಿ ಈಸ್ಟ್ ವಿಂಡ್ಸರ್ ನ RISE ಸಂಸ್ಥೆಗೆ ನೀಡಲಾಯಿತು. ಆ ಸಂಸ್ಥೆಯ ನಿರ್ದೇಶಕಿಯ ಮುಖದಲ್ಲಿನ ಸಂತೋಷ, ನಮ್ಮ ಮನಸ್ಸಿಗೂ ಮುದ ನೀಡಿತು. ನಿಮ್ಮೆಲ್ಲರ ಸಹಕಾರದಿಂದ, ಹೀಗೆಯೇ, ಮುಂಬರುವ ಯೋಜನೆಗಳಲ್ಲಿ, ಇನ್ನೂ ಹೆಚ್ಚಿನ ನೆರವು ನೀಡಲು, ನಮ್ಮ ಬೃಂದಾವನವು ಆರೋಗ್ಯಕರವಾಗಿರಲಿ ಎಂದು ಹಾರೈಸುವ.

ಏನೋ ಒಂದು ಒಳ್ಳೆ ವಿಷಯ ನೋಡಿದಾಗ, ನಮ್ಮವರೂ ಅದನ್ನು ನೋಡಿ ಆನಂದಿಸಬೇಕು ಅಂತ ಅನ್ನಿಸುತ್ತದೆ ಅಲ್ವಾ. ಬೆಂಗಳೂರು ಗಣೇಶೋತ್ಸವದ ಖ್ಯಾತಿಯ BeatGurus ತಂಡ, ನಾವಿಕ ಸಮ್ಮೇಳನಕ್ಕೆ ಆಗಮಿಸುತ್ತಿದ್ದಾರೆ ಎಂದು ತಿಳಿದಾಗ, ಅವರನ್ನು, ನಮ್ಮ ಬೃಂದಾವನಿಗರಿಗೂ ಪರಿಚಯಿಸಬೇಕು; ನಮ್ಮ ಬೃಂದಾವನ ಕುಟುಂಬದವರೆಲ್ಲರೂ, ಈ ಕಾರ್ಯಕ್ರಮವನ್ನು ನೋಡಿ ಆನಂದಿಸಬೇಕು; ಎಂದು ಅವರನ್ನು ನಮ್ಮ ಗಣೇಶೋತ್ಸವಕ್ಕೆ, ಗೌರಿಗಣೇಶ ಹಬ್ಬದ ಮೊದಲೇ ಕರೆಯಿಸಿದೆವು. ಈಗಾಗಲೇ ನಮ್ಮ ಬೃಂದಾವನಿಗರ ಮನ- ಮುಖದಲ್ಲಿ, ಬೃಂದಾವನ ಚ್ಯಾರಿಟಿ ಮೂಲಕ ಗೌರಿ-ಗಣೇಶ ಮೂರ್ತಿ ಸ್ವೀಕರಿಸಿದ ಸಂತಸ; ಜೊತೆಗೆ, ಈ ಯೋಜನೆಯನ್ನು ಆಯೋಜಿಸಿದ ಅಪೂರ್ವ ತಂಡದವರಿಗೂ, ದೇಣಿಗೆಯ ಮೊತ್ತವನ್ನು ಅವುಗಳನ್ನು ತಯಾರಿಸಿದ ಕಲಾವಿದರಿಗೆ ಸಲ್ಲಿಸುವ ಸಂತಸ.

ಬಹುಶಃ ಶಿಲೆಗಳು ಸಂಗೀತವಾ ಹಾಡಿದವು...

ಸಂಗೀತದ ಮಾಯಾಲೋಕಕ್ಕೆ ಕರೆದೊಯ್ದ BeatGurus ಅವರೂ ಸಂತೋಷದ ವಾತಾವರಣ ಸೃಷ್ಟಿಸಿದರು. ಎಲ್ಲರ ಮುಖದಲ್ಲಿ ನಗು-ಉಲ್ಲಾಸ ನೋಡಿ ಸಂಗೀತವೂ ಆರೋಗ್ಯಕ್ಕೆ ಖಂಡಿತವಾಗಿಯೂ ಒಳ್ಳೆಯದು ಅಂತ ಸಂತೋಷವಾಯಿತು.

ಇವರ ಜೊತೆಗೆ, ಹಾಸ್ಯ-ಸಂಭಾಷಕರಾದ, ರಾಯಚೂರು ಹಾಟ್ ಹುಡುಗ, ಶ್ರೀ ರಾಘವೇಂದ್ರ ಆಚಾರ್; ತರ್ಲೆಬಾಕ್ಸ್ ಶ್ರೀ ನಿರೂಪ್ ಮೋಹನ್; ಇಂಜಿನೀಯರ್ಡ್ ಕಾಮಿಡಿಯನ್ ಶ್ರೀ ಕಾರ್ತಿಕ್ ಪತ್ತಾರ್, ಜೋಶೀಲೆ ಶ್ರೀ ವಿನಾಯಕ್ ಜೋಶಿ; ಇವರೆಲ್ಲರೂ ನಮ್ಮನ್ನು ನಗೆಗಡಲಲ್ಲಿ ತೇಲಿಸಿದರು. "Laughter IS the best medicine"- ಆರೋಗ್ಯಕರವಾಗಿರಬೇಕಾದರೆ, ನಕ್ಕು ಸಂತೋಷವಾಗಿರಬೇಕು ಅಂತ ಖಾತ್ರಿಯಾಯಿತು.

ನೋಡುತ್ತಾ, ನೋಡುತ್ತಾ, ಬೇಸಿಗೆ ಕಳೆದು, ಚಳಿ ಶುರು ಆಯಿತು. ಬೇಸಿಗೆ ರಜೆ ಮುಗಿಯಿತು; ಮಕ್ಕಳಿಗೆ ಶಾಲೆ ಶುರು ಆಯ್ತು! ನಮ್ಮಲ್ಲಿ ಸೆಪ್ಟೆಂಬರ್ ಅಂದ್ರೆ, ಕೇವಲ ಮಕ್ಕಳಿಗಲ್ಲದೇ, ಳಳ ಶಿಕ್ಷಕರಿಗೂ ಶಾಲೆ ಶುರು ಆಯಿತು. ಹೌದು, ನಮ್ಮ ೭ ಬೃಂದಾವನ ಕನ್ನಡ ಶಾಲೆಗಳಲ್ಲಿ, ೨೧೨ ವಿದ್ಯಾರ್ಥಿಗಳಿಗೆ, ಕನ್ನಡ ಭಾಷೆಯ ಮೇಲೆ ಆಸಕ್ತಿ ಬೆಳೆಸಲು, 42 ಸ್ವಯಂ-ಪ್ರೇರಿತ ಶಿಕ್ಷಕರು, ಸೇವೆ ಸಲ್ಲಿಸುತ್ತಿದ್ದಾರೆ. ಇವರೆಲ್ಲರಿಗೂ ಸೆಪ್ಟೆಂಬರ್ 5ಕ್ಕೆ ಮಾತ್ರವಲ್ಲದೇ, ದಿನವೂ ಶಿಕ್ಷಕರ ದಿನಾಚರಣೆಯ ಹೃತ್ಪೂರ್ವಕ ಶುಭಾಶಯಗಳು.

ಹೀಗೆಯೇ ನವರಾತ್ರಿ ಹಬ್ಬವೂ ಬಂದೇ ಬಿಟ್ಟಿತು. ನ್ಯೂಜೆರ್ಸಿಯ ಬೃಂದಾವನ ಕನ್ನಡ ಕೂಟವು ಇಲ್ಲಿನ ಚಿನ್ಮಯ ಮಿಷನ್ ಸಹಯೋಗದಲ್ಲಿ ಆಯೋಜಿಸಿದ್ದ , ಕರ್ನಾಟಕದ ರಯೀಸ್ ಖಾನ್ ಹಾಗು ಹಫೀಸ್ ಖಾನ್ ಸಹೋದರರ "ದಾಸ ವಾಣಿ" ಸಂಗೀತ ಕಾರ್ಯಕ್ರಮದಲ್ಲಿ ಈ ಸಹೋದರರು ಅತ್ಯಂತ ತನ್ಮಯತೆಯಿಂದ ಭಕ್ತಿ ಭಾವದಲ್ಲಿ ಹಾಡಿದಾಗ, ಸಭಾಂಗಣದಲ್ಲಿ ನೆರೆದಿದ್ದ ೨೦೦ ಕ್ಕೂ ಹೆಚ್ಚು ಶ್ರೋತೃಗಳ ಮುಂದೆ "ಕೃಷ್ಣ ಏನಬಾರದೇ".ಅಂದಾಗ, ಸಾಕ್ಷಾತ್ ಕೃಷ್ಣ ಪರಮಾತ್ಮನೇ ನಮ್ಮ ಬೃಂದಾವನದಲ್ಲಿದ್ದಷ್ಟು ಸಂತೋಷವಾಯಿತು.

ಇನ್ನು ನಮ್ಮ ಬೃಂದಾವನ ಸದಸ್ಯರಿಂದ-ಸದಸ್ಯರಿಗಾಗಿಯೇ ನಿರಂತರವಾಗಿ ನಡೆಯುತ್ತಿರುವ ಹಾಗು ಮುಂದೆ ನಡೆಯಲಿರುವ ಕಾರ್ಯಕ್ರಮಗಳ ಬಗ್ಗೆ ಒಂದು ಪಕ್ಷಿನೋಟ ವನ್ನು ನಿಮ್ಮ ಮುಂದಿಡುತ್ತಿದ್ದೇನೆ.

ಸಾಹಿತ್ಯಾಸಕ್ತರಿಗಾಗಿ, ಪುಸ್ತಕ ಚಾವಡಿಯಲ್ಲಿ " ಶ್ರೀ ಪೂರ್ಣಚಂದ್ರ ತೇಜಸ್ವಿಯವರ "ಚಂದ್ರನ ಚೂರು" ಪುಸ್ತಕಾವಲೋಕನ ಮಾಡಿ, ಈ ತಿಂಗಳು ತ. ರಾ. ಸು.ರವರ ಹಂಸಗೀತೆ ಪುಸ್ತಕದ ಬಗ್ಗೆ ವಿಮರ್ಶೆ ನಡೆಯುವುದು. ತಾವೆಲ್ಲರೂ ಆ ಪುಸ್ತಕವನ್ನು ಓದಿ, ವಿಮರ್ಶೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಿರೆಂದು ಆಶಯ.

ಇನ್ನು ಬರುವ ವಾರ ನಮ್ಮ ರN for ಕmmunity ಯಲ್ಲಿ ತಾವೆಲ್ಲರೂ ಬೃಂದಾವನದ ಆರೋಗ್ಯಕ್ಕೆ ಭಾಗವಹಿಸಿರಿ ಎಂದು ಕೋರುತ್ತೇವೆ.

ಅದರ ಜೊತೆಗೆ, Be the match ಸಂಸ್ಥೆಯೊಂದಿಗೆ, ನಾವು ಲುಕೀಮಿಯಾ ಪೀಡಿತರಿಗೆ ನೆರವು ನೀಡುವಲ್ಲಿ Bone Marrow Donor ಕಾರ್ಯಕ್ರಮದ ಬಗ್ಗೆ ಹೆಚ್ಚಿನ ಮಾಹಿತಿ ನೀಡಲಿದ್ದೇವೆ. ತಾವೆಲ್ಲರೂ ಭಾಗವಹಿಸುವಿರಿ, ಎಂಬ ಭರವಸೆಯಿಂದ ಸಂತೋಷವಾಗುತ್ತಿದೆ.

ಡಿಸೆಂಬರ್ ಬಂದರೆ, ಮಕ್ಕಳೋತ್ಸವ, ಬೃಂದಾವನ ವಾರ್ಷಿಕೋತ್ಸವಕ್ಕೆ ತಯಾರಿ ನಡೆಯುತ್ತಿರುತ್ತದೆ. ಪುನ: ದಯವಿಟ್ಟು ಹೆಚ್ಚಿನ ಸಂಖ್ಯೆಯಲ್ಲಿ ವೇದಿಕೆಯ ಮೇಲೆಯೂ, ಪ್ರೇಕ್ಷಕರಾಗಿಯೂ ಭಾಗವಹಿಸಿ. ನೀವೇ ನಮ್ಮ ಬೃಂದಾವನದ ಆರೋಗ್ಯಕ್ಕೆ ಔಷಧಿ.

..... ಹೀಗೆಯೇ ಸದಾ ಸಂತೋಷವಾಗಿರಿ, ಆರೋಗ್ಯವಾಗಿರಿ.
ಈ ಸಲದ "ಬೃಂದಾವನ ವಾಣಿಯ" ಸಂಚಿಕೆಯನ್ನು, ಓದಿ ಆಸ್ವಾದಿಸಲು ನಿಮ್ಮೆಲ್ಲರನ್ನೂ ಸ್ವಾಗತಿಸುತ್ತ, ನಮ್ಮೀ ಬೃಂದಾವನದಲ್ಲಿ ನಿಮ್ಮೀ ಸುಮಧುರ, ಸ್ನೇಹ ಸಮ್ಮಿಲನ ಹೀಗೆಯೇ ಮುಂದುವರೆಯಲಿ ಎಂದು ಆಶಿಸುವೆ
"ನಗುತಾ, ನಗುತಾ ಬಾಳೀ ನೀವೂ ನೂರೂ ವರುಷ ,
ಎಂದು ಹೀಗೆ ಇರಲಿ ಇರಲಿ ಹರುಷ ಹರುಷಾ"

"ನಗುತಾ, ನಗುತಾ ಬಾಳೀ ನೀವೂ ನೂರೂ ವರುಷ"



ಅರ್ಚನಾ ಆಚಾರ್ಯ,
ಅಪೂರ್ವ ತಂಡ, ಬೃಂದಾವನ, ನ್ಯೂ ಜೆರ್ಸಿ.

Give this poster a minute

And you will be giving them a second chance to live

Blood Stem Cell Donation can help cure the most fatal blood disorders.

Blood Stem Cell Donation is harmless and quick

Take the first step to Gift a life by walking in and giving the cheek swab.

Register online for the 5K run or walk:

https://brindavana.org/events

Shobha Mahesh - 45 years old
Battling Leaukemia AML M5

Hi! I am Shobha, a doctor by profession. Personally, I am a caring daughter, sister, loving wife and a blessed mother of two.

I am battling type of cancer which affects blood cells and bone marrow. Only way for me to survive this is stem cell transplant.

Please help me by registering as a blood stem cell donor.
You could save my LIFE!

When: November 5, 2023
Time: 8 am - 11 am
Where:
North Brunswick Community Park
2051, US 130
North Brunswick, NJ 08902

BE THE MATCH®

RN FOR KMMUNITY
5K Walk or Run
Support Team Apoorva
@ Brindavana Kannada Koota, NJ &
BE THE MATCH
http://my.bethematch.org/curene
On November 5, 2023,
From 8am-11am
LAST DAY TO REGISTER ONLINE:
NOVEMBER 2, 2023
North Brunswick Community Park.
2051. US130. North Brunswick. NJ.
08902
$12 - 12yrs & above
$8 - 5-12yrs
Free - below 5yrs
www.bridavana.org/events
SR Finance
JYOTI SHIRAHATTI
630-649-8190
Perth Amboy

ನಂಬಿಕೆ

ಶ್ರೀ ಯೋಗೀಂದ್ರ ಭಟ್ ಉಳಿ. *ಶ್ರೀ ಕೃಷ್ಣವೃಂದಾವನ, ನ್ಯೂಜೆರ್ಸಿ.*

ಎತ್ತರದ ಗೂಡಿನೊಳಗೆ ಹಸಿದು ಬಾಯ್ತೆರೆದು ಕುಳಿತ ಹಕ್ಕಿಮರಿಗಳಿಗೆ ಅಮ್ಮ ಬರುತ್ತಾಳೆ, ಆಹಾರ ತರುತ್ತಾಳೆ ಎಂಬ ನಂಬಿಕೆ. ಆಹಾರವನ್ನರಸಿ ಹೊರಟ ತಾಯಿಹಕ್ಕಿಗೆ ತನ್ನ ಗೂಡು ಭದ್ರವಾಗಿದೆ, ಮುದ್ದು ಮಕ್ಕಳು ಕ್ಷೇಮವಾಗಿದ್ದಾರೆ ಎಂಬ ನಂಬಿಕೆ. ಆ ಗೂಡನ್ನು ಹೊತ್ತು ನಿಂತ ಮರಕ್ಕೆ ತನ್ನ ಬೇರುಗಳು ಭೂಮಿಯೊಳಗೆ ಸುಭದ್ರವಾಗಿವೆ, ನಿಂತಲ್ಲೇ ತನಗೆ ನೀರು- ಆಹಾರ ಸಿಗುತ್ತದೆ, ತಾನು ಚಿರಕಾಲ ಸ್ಥಿರವಾಗಿ ನಿಂತಿರುತ್ತೇನೆ ಎಂಬ ನಂಬಿಕೆ. ಹೀಗೆ ನಂಬಿಕೆಯೆನ್ನುವ ಭದ್ರ ಬುನಾದಿಯ ಮೇಲೆ ಈ ಭೂಮಿಯ ಎಲ್ಲ ಜೀವಜಾತಗಳ ಬದುಕು ಅವಲಂಬಿತವಾಗಿದೆ.

ಮಳೆ ಬರುತ್ತದೆ ಎಂಬ ನಂಬಿಕೆಯಿಂದ ರೈತ ಬೆಳೆಯನ್ನು ಬೆಳೆಯಬೇಕು. ನೆಟ್ಟ ಮಾವಿನ ಗಿಡ ಬೆಳೆದು ಹಣ್ಣು ಕೊಡುತ್ತದೆ ಎಂಬ ನಂಬಿಕೆಯಿಂದ ನೀರೆರೆದು ಆರೈಕೆ ಮಾಡಬೇಕು. ನೀರು ಸಿಗುತ್ತದೆ ಎಂಬ ನಂಬಿಕೆಯಿಂದ ಕೆರೆ-ಬಾವಿ ತೋಡಬೇಕು. ಗಟ್ಟಿ ತಳಪಾಯವನ್ನು ಈ ಭೂಮಿ ಭದ್ರವಾಗಿ ಹಿಡಿದಿಟ್ಟುಕೊಂಡಿದೆ ಎಂಬ ನಂಬಿಕೆಯಿಂದ ನಾವು ಮನೆಕಟ್ಟಿ ಬಾಳಬೇಕು. ಬಿಸಿಲು, ಗಾಳಿ, ಮಳೆಗಳಿಂದ ನಮ್ಮನ್ನು ಕಾಪಾಡಲು ಮನೆಯ ಮಾಡು ಸಮರ್ಥವಾಗಿದೆ ಎಂಬ ನಂಬಿಕೆಯಿಂದ ಒಳಗೆ ನೆಮ್ಮದಿಯಾಗಿ ನಿದ್ರಿಸಬೇಕು.

ಗಂಡ ಸಂಪಾದಿಸಿದ ಸಂಪತ್ತು ನ್ಯಾಯಯುತವಾದದ್ದು ಎಂಬ ನಂಬಿಕೆ ಹೆಂಡತಿಯದ್ದು. ತಾನು ದುಡಿದು ತಂದ ಸಂಪಾದನೆಯನ್ನು ಹೆಂಡತಿ ನಿರ್ವಂಚನೆಯಿಂದ ಬಳಸಿಕೊಂಡು ಮನೆಯನ್ನು ಚೆನ್ನಾಗಿ ನಡೆಸಿಕೊಂಡು ಹೋಗುತ್ತಾಳೆ ಎಂಬ ನಂಬಿಕೆ ಗಂಡನದ್ದು. ಮಕ್ಕಳಿಗೆ ಒಳ್ಳೆಯ ವಿದ್ಯೆ, ಸಂಸ್ಕಾರ ಕೊಟ್ಟಿದ್ದೇವೆ, ಮುಂದೆ ಒಳ್ಳೆಯವರಾಗಿ ಬದುಕುತ್ತಾರೆ ಎಂಬ ನಂಬಿಕೆ ಹೆತ್ತವರದ್ದು. ಪರಂಪರಾಗತವಾದ ಜೀವನಮೌಲ್ಯಗಳನ್ನು, ಆಚರಣೆಗಳನ್ನು ನಮ್ಮ ನಂತರದವರು ಉಳಿಸಿಕೊಂಡು ಹೋಗುತ್ತಾರೆ ಎಂಬ ನಂಬಿಕೆ ಗುರುಹಿರಿಯರದ್ದು. ಹೀಗೆ ನಮ್ಮ ನಮ್ಮ ಮನೆಗಳಲ್ಲಿಯೂ ನೆಮ್ಮದಿಯ ಬದುಕಿಗೆ ಕಾರಣವಾಗಿರುವುದು ನಮ್ಮೊಳಗಿರುವ ನಿಶ್ಚಲವಾದ ನಂಬಿಕೆ.

ಸುವ್ಯವಸ್ಥಿತವಾದ ನಮ್ಮ ನಾಗರೀಕ ಜೀವನದ ನಿಯಮಗಳಿಗೂ ಪರಸ್ಪರ ನಂಬಿಕೆಯಿನ್ನುವುದೊಂದೇ ಆಧಾರಸ್ತಂಭ. ಆಳುವವರು ನೈತಿಕ ರಾಜಧರ್ಮಗಳನ್ನು ಪಾಲಿಸುತ್ತಾರೆ, ನಿರ್ವಂಚನೆಯಿಂದ ಆಡಳಿತ ನಡೆಸುತ್ತಾರೆ ಎಂಬ ನಂಬಿಕೆ ಪ್ರಜೆಗಳದ್ದು. ನೀತಿ, ನಿಯಮಗಳಿಗೆ ಬದ್ಧರಾಗಿ ಬದುಕಿ ಪ್ರಜೆಗಳು ಸರಿಯಾದ ಸಹಕಾರನೀಡುತ್ತಾರೆ ಎಂಬ ನಂಬಿಕೆ ಆಡಳಿತ ನಡೆಸುವವರದ್ದು. ಹೀಗೆ ಸಾಮಾಜಿಕ ವ್ಯವಸ್ಥೆಯಲ್ಲಿನ ಕಟ್ಟುಪಾಡುಗಳಲ್ಲಿ, ನಿಯಮಾವಳಿಗಳಲ್ಲಿ ಮತ್ತು ಸಂವಿಧಾನದಲ್ಲಿ ನಂಬಿಕೆಯಿದ್ದರೆ ಮಾತ್ರ ದೇಶ ಸುಭಿಕ್ಷವಾಗಿರುವುದು ಸಾಧ್ಯ.

ನಮ್ಮೊಳಗಿನ ದೈಹಿಕ ಸ್ವಚ್ಛತೆ, ಮಾನಸಿಕ ಮಡಿ ಮೈಲಿಗೆಯೆಂಬುವುದೂ ಒಂದು ನಂಬಿಕೆಯೇ. ನಮ್ಮವರು ಚೆನ್ನಾಗಿ ಶೌಚ ಶುದ್ಧಿಯನ್ನು ಪಾಲಿಸುತ್ತಿದ್ದಾರೆ, ಕೈಕಾಲು ಮುಖವನ್ನು ಶುದ್ಧವಾಗಿರಿಸಿಕೊಂಡಿದಾರೆ, ದೇಹವನ್ನು ಸ್ವಚ್ಛವಾಗಿರಿಸಿಕೊಂಡೇ ದೇವರಪೂಜೆ, ಅಡುಗೆ ಮಾಡಿದಾರೆ ಎಂಬಿತ್ಯಾದಿಯಾಗಿ ನಾವು ನಂಬಬೇಕಷ್ಟೆ. ಅವರವರ ಸ್ವಚ್ಛತೆಯ ಸತ್ಯ ಅವರವರಿಗಷ್ಟೇ ಗೊತ್ತು.

ಹಿನ್ನೋಟ

ಶ್ರಾವಣ ಸಂಧ್ಯಾ

ಬೃಂದಾವನದಲ್ಲೊಂದು ಸಂಭ್ರಮ!

ಬೃಂದಾವನದಲ್ಲೊಂದು ಸಂಭ್ರಮದ ಗಣೇಶೋತ್ಸವ! ಪ್ರತೀ ವರ್ಷದ ಅದ್ದೂರಿ ಕಾರ್ಯಕ್ರಮಗಳಲ್ಲಿ ಗಣಪನ ವಿಜೃಂಭಣೆಯ ಕಾರ್ಯಕ್ರಮವು ಸಹ ಒಂದು.ಈ ಭಾರಿಯ ಅಬ್ಬರದ ಮಳೆಯ ನಡುವೆ ಸಡಗರದ ಹಬ್ಬ ನಾನ್ನೂರಕ್ಕು ಹೆಚ್ಚು ಜನ ಸೇರಿ ಫ್ರಾಂಕ್ಲಿನ್ ಮಿಡ್ಲ್ ಸ್ಕೂಲ್ ನಲ್ಲಿ ಆಚರಿಸಿದ್ದು ಒಂದು ವಿಸ್ಮಯವೇ ಸರಿ.

ಗಣೇಶೋತ್ಸವದ ಅಂಗವಾಗಿ ಅಪೂರ್ವ ತಂಡ ಸಡಗರದಿಂದ ತಯಾರಿ ನಡೆಸಿತ್ತು . ಗಗನಕ್ಕೇರಿದ ಬೆಲೆಗಳಿಂದ ಪ್ರತಿಯೊಂದು ಕಾರ್ಯಕ್ರಮಗಳು ಕೂಲಂಕುಷವಾಗಿ ಚಿಂತಿಸಿ ಕನ್ನಡಿಗರ ಮನಸ್ಸು ಗೆಲ್ಲಲು ಹೊಚ್ಚ ಹೊಸ ಕಾರ್ಯಕ್ರಮಗಳನ್ನು ಕೊಡಲು ಎರಡು ವೈವಿಧ್ಯಮಯವಾದ ತಂಡಗಳನ್ನು ಬೆಂಗಳೂರಿನಿಂದ ಕರೆ ತರಲಾಗಿತ್ತು.

ಸರಿ ಸುಮಾರು 11 ಗಂಟೆಗೆ ಕುಂಭದ್ರೋಣ ಮಳೆಯಿಂದ ಬಿಡುಗಡೆ ಹೊಂದುವಂತೆ ಗಣಪನ ಪೂಜೆಯೊಂದಿಗೆ ಶ್ರೀ ಬಸವರಾಜ್ ಹಿರೇಮಠ್ ಅವರು ಮಕ್ಕಳೊಡನೆ ಕಾರ್ಯಕ್ರಮ ಪ್ರಾರಂಭ ಮಾಡಿದರು. ನಿಧಾನವಾಗಿ ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ಗಣಪನ ಪೂಜಾ ವಿಧಿ ವಿಧಾನವನ್ನು ತಿಳಿಸಿ , ಶ್ರೀಮತಿ ಅರ್ಚನಾ ಆಚಾರ್ಯ ದಂಪತಿಗಳು ಅಪೂರ್ವ ತಂಡದ ಪರವಾಗಿ ನೆರವೇರಿಸಿದರು , ಸುಮಾರು 20 ಕ್ಕೂ ಹೆಚ್ಚು ಮಕ್ಕಳು ಪೂಜೆಯನ್ನು ಹೂವಿನಿಂದ ಸಂಭ್ರಮದಿಂದ ಆಚರಿಸಿ , ಅದನ್ನು ಸಮರ್ಪಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಪ್ರಸಾದವನ್ನು ಹಂಚುವುದರ ಮೂಲಕ ಗಣಪತಿ ಪೂಜೆ ನೆರವೇರಿತು.

ಬಿಸಿ ಬಿಸಿಯಾದ ಹಬ್ಬದ ಊಟ ಎಲ್ಲರಿಗಾಗಿ ಕಾದು ಕುಳಿತಿತ್ತು . ಶ್ರೀ ಪ್ರಸನ್ನ ಕೊರಿಯವರು, ಯುವ ತಂಡದೊಂದಿಗೆ ಅದನ್ನು ಬಡಿಸುವ ತಯಾರಿನಡೆಸಿದ್ದಾಗ ನಮ್ಮನ್ನು ನಗೆಗಡಲಿನಲ್ಲಿ ತೇಲಿಸಲು ಅತಿಥಿಗಳಾದ ರಾಘವೇಂದ್ರ ಆಚಾರ್ಯ ,ವಿನಾಯಕ್ ಜೋಶಿ , ಕಾರ್ತಿಕ್ ಹಾಗು ನಿರೂಪ್ ಮೋಹನ್ ಆಗಮಿಸಿದರು. ಕ್ಯಾರೆಟ್ ಹಲ್ವಾ , ಕೇಸರಿ ಬಾತ್ ಸಿಹಿ ತಿಂಡಿಗಳ ಹಬ್ಬದ ಹಲವು ವಿಶೇಷ ಅಡುಗೆಯೊಂದಿಗೆ ಎಲ್ಲರು ಬೆರೆತು ಸವಿದರು.

2 ಗಂಟೆಗಳ ಕಾಲ ವಿನಾಯಕ್ ಜೋಶಿ ಅವರು “Stand up Comedy” ಕಾರ್ಯಕ್ರಮವನ್ನು ನಡೆಸಿ ಕೊಟ್ಟರು, ಕಾರ್ತಿಕ್ ಅವರು ಮಾತಾಡುವ ಬೊಂಬೆಯೊಂದಿಗೆ ಎಲ್ಲರ ಮನೆ ಸೆಳೆದರು. ನಂತರ ನಿರೂಪ್ ಮೋಹನ್ ಅವರು ತಾವು ಬೆಳೆದು ಬಂದ ರೀತಿಯನ್ನು ನಗೆರೂಪದಲ್ಲಿ ವಿವರಿಸಿದರು. ನಂತರ ರಾಘವೇಂದ್ರ ಆಚಾರ್ಯ ಅವರು ತಮ್ಮ ಹಾಸ್ಯದ ಹೊನಲನ್ನು ಹರಿಸಿದರು. ಜನರು ಹೊಟ್ಟೆ ಹುಣ್ಣಾಗುವಷ್ಟು ನಗೆ ಸರಕನ್ನು ನಮಗೆ ಕೊಟ್ಟಿದ್ದರು.

ಕಾರ್ಯಕ್ರಮದ ಮಧ್ಯದಲ್ಲಿ ಲಕ್ಷ್ಮಿ ರಾವ್ , ಸವಿತಾ ಆನಂದ್ ತಂಡದವರಿಂದ ಗಣಪನ ಹಾಡಿಗೆ Flash mob ನೃತ್ಯ ಎಲ್ಲರ ಗಮನ ಸೆಳೆಯಿತು.

ಕಾರ್ಯಕ್ರಮದ ಇನ್ನೊಂದು ವಿಶೇಷ "Beat Gurus” ಅವರ ವಿಶೇಷ ಸಂಗೀತ ವಾದ್ಯಗಳ ಸಮ್ಮೇಳನ (ಡೋಲು , ನಗಾರಿ , ಡಮರುಗ , ತಾಳ) ಇದರೊಂದಿಗೆ ವಿಶೇಷ ಕೊಳಲು ಕಾರ್ಯಕ್ರಮದ ಮುಖ್ಯ ಆಕರ್ಷಣೆಯ ಬಿಂದು. ಒಂದೊಂದು ಹಾಡು , ರಾಗ ಬಾರಿಸುತ್ತಿದ್ದಂತೆ ಜನರ ಉತ್ಸಾಹ ಏರುತ್ತಿತ್ತು .. ಕರ್ನಾಟಕ ರತ್ನ ಡಾ ಪುನೀತ್ ರಾಜಕುಮಾರ್ ಅವರ ಬೋಂಬೆ ಹೇಳುತ್ತೈತೆ ಹಾಡಿಗಂತೂ ಎಲ್ಲರ ಕಣ್ಣು ಮಂಜಾಗಿತ್ತು . ಇದರ ಮಧ್ಯದಲ್ಲಿ ಮತ್ತೊಮ್ಮೆ ರುಚಿ ರುಚಿಯಾದ ತಿಂಡಿಯೊಂದಿಗೆ - Coffee break ಎಲ್ಲರು ಒಡಗೂಡಿ ಮತ್ತೊಮ್ಮೆ ಸವಿಯುವಂತಾಯಿತು.

ಕಾರ್ಯಕ್ರಮದ ಹಲವಾರು ಪ್ರಾಯೋಜಕರು ತಮ್ಮ ಮಳಿಗೆಗಳನ್ನು ತೆರೆದಿದ್ದರು. ಪ್ರಥಮ ಬಾರಿಗೆ "ಅಡುಕಲೆ" (ಅಡುಗೆ ಕಲೆ) ಅವರ ವಿಶೇಷ ತಿಂಡಿಗಳ ಮಳಿಗೆಯಂತೂ ಜನ ಮುಗಿಬಿದ್ದು ಖರೀದಿ ಮಾಡಿದರು. ಬೃಂದಾವನ ಕಾರ್ಯಕ್ರಮ ಹಬ್ಬದ ಆಚರಣೆಯೊಂದಿಗೆ ವ್ಯಾಪಾರಕ್ಕೂ ಒಂದು ಉತ್ತಮ ವೇದಿಕೆಯಾಯಿತು. ತುಂಬಾ ಸುಂದರವಾಗಿ ಸಜ್ಜಾಗಿದ್ದ ವೇದಿಕೆ , ಗಣಪನ ಆಕರ್ಷಕ ಮುಖ್ಯದ್ವಾರ , ಫೋಟೋ ಬೂತ್ ಎಲ್ಲವು ಹಲವಾರು ಸ್ವಯಂ ಸೇವಕರು ಕೈ ಜೋಡಿಸಿ ಮಾಡಿದ ಕಾರ್ಯಕ್ರಮ ಎಲ್ಲರ ಮೆಚ್ಚುಗೆಗಳಿಸಿತ್ತು.ಮತ್ತೊಮ್ಮೆ ಗಣಪನ ಕಾರ್ಯಕ್ರಮ ಎಲ್ಲರ ಮನ ಸೂರೆಗೊಂಡಿತು.

More Photos @ - https://photos.app.goo.gl/CHFYwEBbTqSSUarb7

ಬರಹಗಳು

ಶ್ರಾವಣ ಸಂಧ್ಯಾ

ಸಹದೇವನ ಮಾತೃವಾತ್ಸಲ್ಯ

ವಿನಯ್ ಕುಮಾರ್ ಜಾನಕಿರಾಮ್, *ಮೈಸೂರು*

ಎಣಿಸಿದಂತೆಯೇ ಪಾಂಡವರ ಹಾಗು ಕೌರವರ ಸಂಧಿ ಮುರಿದು ಬಿದ್ದಿದೆ, ಮುಂದೆ ಯುದ್ಧವೇ ಆಗುವ ವಾತಾವರಣ ಮೂರ್ನಾಲ್ಕು ದಿನಗಳಿಂದ ಕುಂತಿಗೆ ಮನಸ್ಸಿನಲ್ಲಿ ಏನೋ ವ್ಯಸನ, ಏನೋ ನಡೆದುಹೋಗುವುದಿದೆ ಎಂದು ದುಗುಡ. ಆಕೆ ಯಾರಲ್ಲೂ ಏನನ್ನು ಹೇಳಿಕೊಂಡವಳಲ್ಲ. ಈಗ ತನ್ನ ಮಕ್ಕಳ ನೆನಪಾಗುತ್ತಿದೆ. ಧರ್ಮ, ಭೀಮ, ಅರ್ಜುನ, ನಕುಲ, ಸಹದೇವ ಎಲ್ಲರೂ ತನಗೆ ಹತ್ತಿರದವರೇ. ಆದರೂ, ಮೊದಲಿನಿಂದ ನಕುಲ ಮತ್ತು ಸಹದೇವರ ಮೇಲೆ ವಿಶೇಷ ಪ್ರೀತಿ! ತಾಯಿ ಮಾದ್ರಿ ಸತ್ತಾಗ ಇವು ಇನ್ನು ಹಸು ಗೂಸುಗಳು. ತಾಯಿ ಇಲ್ಲದ ತಬ್ಬಲಿಗಳು ಎಂದೋ, ಇಲ್ಲಾ ಲೋಕದ ಕಣ್ಣಿಗೆ ತೋರಿಸಲೆಂದೋ, ಒಟ್ಟಿನಲ್ಲಿ ಶುರುವಾದ ಪ್ರೀತಿ, ಅದು ಬಲಿತು, ಇವು ನನ್ನ ಮಕ್ಕಳೇ, ಮಾದ್ರಿಗೆ ನಾನು ಮಂತ್ರೋಚ್ಚಾರ ಮಾಡಿಸದಿದ್ದಿದ್ದರೆ, ಅವಳು ಬಂಜೆಯಾಗೆ ಇರಬೇಕಿತ್ತು! ಹಾಗಾಗಿ ಇವೂ ನನ್ನ ಮಕ್ಕಳೇ ಎಂಬ ಹುಚ್ಚು ಪ್ರೀತಿ ಇಂದಲೋ ಏನೋ, ಕುಂತಿ ನಕುಲ ಸಹದೇವರನ್ನು ಬಹಳ ಹಚ್ಚಿಕೊಂಡಿದ್ದಳು. ತಾನು ಇವರಿಬ್ಬರಿಗೂ ಹೇಳಿರುವಷ್ಟು ಪುರಾಣ ಕಥೆಗಳಿಗೆ ಲೆಕ್ಕವೇ ಇಲ್ಲಾ!

ಚಿತ್ರ ಕೃಪೆ: ಅಂತರ್ಜಾಲ

ರಟ್ಟೆ ಬಲಿತ, ತಾಯಿಗಿಂತ ಎತ್ತರವಾಗಿ ಬೆಳೆದ ಮಕ್ಕಳಿಗೆ, ತಾಯಿಯ ಮೇಲೆ ಪ್ರೀತಿ ಇದ್ದರೂ, ಅದನ್ನು ತೋರಿಸಿಕೊಳ್ಳಲು ಬಿಗುಮಾನ ನಾಚಿಕೆ! ಮಕ್ಕಳೆಲ್ಲರೂ ಯಾವಾಗಲೂ ಶಸ್ತ್ರ ವಿದ್ಯೆಯ ಬಗ್ಗೆ, ಯುದ್ಧ ತಂತ್ರಗಳಬಗ್ಗೆ ಚರ್ಚೆ ಮಾಡಿಕೊಳ್ಳುತ್ತಿದ್ದರೆ, ಸಹದೇವ ಏನನ್ನೋ ಲೆಕ್ಕ ಹಾಕಿಕೊಳ್ಳುತ್ತಾನೆ, ಅವಲೋಕಿಸಿ ಬರೆದುಕೊಳ್ಳುತ್ತಾನೆ! ಒಮ್ಮೊಮ್ಮೆ ಕೃಷ್ಣನೂ ಸಹದೇವನೊಂದಿಗೆ ಚರ್ಚಿಸುತ್ತಾನೆ. ಏನಿದು? ತಾಯಿಯಾಗಿ ನನಗೆ ಗೊತ್ತಿಲ್ಲದ ಮಗನ ಪಾರಂಗತ್ಯ? ಹಾಗೆ ನೋಡಿದರೆ ಸಹದೇವನಿಗೆ ಹಾಗೂ ನನಗೆ ಸಲಿಗೆ ಜಾಸ್ತಿ. ಅವನಿಗೆ ಶಸ್ತ್ರ ವಿದ್ಯೆಯ ಜೊತೆಗೆ ಜ್ಯೋತಿಷ್ಯ ಶಾಸ್ತ್ರ, ವೈದ್ಯ ಶಾಸ್ತ್ರ ದಲ್ಲೂ ಪರಿಣಿತಿ. ಅಡಿಗೆ ಮನೆಯಲ್ಲಿ ಯಾವುದಾದರೊಂದು ಔಷಧಿ ಇವಳ ಸಹಾಯದಲ್ಲಿ ತಯಾರುಮಾಡುತ್ತಿದ್ದ. ಹಾಗಾಗೆ ಇವಳ ಆಹಾರದ ಇಷ್ಟ ಕಷ್ಟಗಳನ್ನು ತಿಳಿದಿದ್ದ ಏಕೈಕ ಪುತ್ರ. ವನವಾಸದಲ್ಲಿದ್ದಾಗ, ಯಾವುದೊ ವಿಷದ ಮುಳ್ಳು ಚುಚ್ಚಿದಾಗ, ಎಲ್ಲಿಂದಲೋ ಬೇರು, ಮೂಲಿಕೆ ತಂದು ಹಚ್ಚಿ, ಕಷಾಯ ಮಾಡಿ ಕುಡಿಸಿದವ ಇವನೇ! ಇವೆಲ್ಲಾ ದೃಶ್ಯಗಳಾಗಿ ಇವಳ ಮುಂದೆ ಬಂದವು. ತನಗೇಕೆ ಸಹದೇವನ ನೆನಪು ಕಾಡುತ್ತಿದೆ ಅರ್ಥವಾಗುತ್ತಿದ್ದಾಗಲೇ, ಯಾವಾಗಲೋ ಕೃಷ್ಣ 'ನಿನಗೆ ಮನಸಿನಲ್ಲಿ ದುಗುಡ ವಿದ್ದರೆ, ಸಹದೇವನಲ್ಲಿ ಹೇಳಿಕೊ' ಎಂದು ಹೇಳಿದ್ದು ನೆನಪಿಗೆ ಬಂತು. ತಾನಿರುವುದು ಹಸ್ತಿನಾವತಿಯಲ್ಲಿ. ಪಾಂಡವರು ಇಲ್ಲಿಲ್ಲ. ಹೇಗೆ ಸಹದೇವನನ್ನು ಭೇಟಿ ಮಾಡುವುದು? ಹಾಗೆಯೇ ನದಿಯ ಘಟ್ಟಗಳನ್ನು ನೋಡುತ್ತಾ ಮುಂದೆ ಬಂದಳು. ಸೂರ್ಯನು ಆದಿನದ ಕೆಲಸ ಮುಗಿಸಿ, ಸೋಮನಿಗೆ /ಚಂದ್ರನಿಗೆ ದಾರಿ ಮಾಡಿಕೊಡುವ ಸಂಧ್ಯಾ ಕಾಲ ಸಮೀಪಿಸುತ್ತಿದೆ. ವಟುಗಳು ಸಂಧ್ಯಾವಂದನೆ ಮಾಡಲು, ಅರ್ಘ್ಯಬಿಡಲು ಬರುತ್ತಿದ್ದಾರೆ. ದೂರದಲ್ಲಿ ಯಾರೋ ಅರ್ಘ್ಯ ಬಿಟ್ಟು, ಆಚಮನ ಮುಗಿಸಿ, ಜಪಮಾಡಲು ಈ ಘಟ್ಟಕ್ಕೆ ಬರುತ್ತಿರುವುದನ್ನು ನೋಡಿ, ಸಹದೇವನಾಗಿದ್ದರೆ ಎಷ್ಟು ಚಂದ ಅಂದುಕೊಂಡು, ತನ್ನ ಮಂಕುಬುದ್ಧಿಗೆ ತಾನೇ ನಕ್ಕು, ಮನೆಯ ಕಡೆಗೆ ಹೊರಡಲು ತಿರುಗಿದಳು.

"ಅಮ್ಮ" ಅನ್ನುವ ಸಹದೇವನ ಧ್ವನಿಕೇಳಿ, ಅವಳ ನರ ನಾಡಿಗಳೆಲ್ಲಾ ಉಬ್ಬಿ, ಕೊರಳು ಕಟ್ಟಿ ಮಾತು ಬರದಂತಾಯಿತು! ಏನೋ ಹೇಳಲು ಕುಂತಿ ಬಾಯಿ ತೆರೆಯಲು, ಮುಂದೆ ಬಂದ ಸಹದೇವ ಅವಳ ಬಾಯಿಯನ್ನು ಕೈಗಳಿಂದ ಮುಚ್ಚಿ, 'ಅಮ್ಮಾ, ತಾಯಿಯಾದವಳು ಕೇಳುವುದಕ್ಕೆ ಮುನ್ನವೇ, ಮಕ್ಕಳು ಅದನ್ನು ಅರ್ಥ ಮಾಡಿಕೊಂಡು ನಡೆಯುವ, ಪಾಲಿಸುವ ಸಂಸ್ಕೃತಿ ಕಲಿಸಿರುವ ನಿನಗೆ, ಏಕೆ ದುಗುಡ?'! ಸಹದೇವನ ಪಾಂಡಿತ್ಯವನ್ನು ಅರ್ಥ ಮಾಡಿಕೊಂಡಿದ್ದವರು ಕೆಲವೇ ಕೆಲವರು, ಕೃಷ್ಣ, ಧುರ್ಯೋಧನ ಹೀಗೆ. ಧರ್ಮನಿಗೆ, ಸಹದೇವನ ಪಾಂಡಿತ್ಯದ ಬಗೆಗೆ ಅರಿವಿದ್ದರೆ, ತನ್ನ ಬದಲು, ಸಹದೇವನನ್ನು ಪಗಡೆ ಆಟಕ್ಕೆ ಕೂರಿಸುತ್ತಿದ್ದ! ಇವನು ಪಗಡೆ ಆಟವಾಡಲು ಕುಳಿತಿದ್ದರೆ, ದುರ್ಯೋಧನ ಖಂಡಿತ ಜೂಜಾಡುತ್ತಿರಲಿಲ್ಲ!

ಸಹದೇವ ಎಲ್ಲವನ್ನೂ ತಿಳಿದಿದ್ದ ಜ್ಞಾನಿ. ಅವನು ತನ್ನ ಜ್ಯೋತಿಷ್ಯವನ್ನು ಯಾವತ್ತೂ ಪ್ರದರ್ಶನಕ್ಕೆ ಇಟ್ಟವನಲ್ಲ, ಅದಕ್ಕೆ ಏನೋ ಮಿತಭಾಷಿ!!

ಸಹದೇವ, ಅಮ್ಮಾ ನಿನಗೆ ನಿನ್ನ ಆರು ಮಕ್ಕಳಲ್ಲಿ ಮೊದಲ ಮಗ ಸಿಗುವ ಕಾಲ ಬಂದಿದೆ. ಕುಂತಿಗೆ, ಈಗ ಮಗನ ಪಾಂಡಿತ್ಯದ ಬಗೆಗೆ ಅರಿವಾಯ್ತು! ಯಾರಿಗೂ ಹೇಳದ ರಹಸ್ಯ, ತನ್ನ ಮಗನಿಗೆ ಗೊತ್ತಿದೆ! ಅಬ್ಬಾ ಎಂತಹ ಸಜ್ಜನ? ಒಂದು ದಿನವೂ ಇದರ ಬಗೆಗೆ ಮಾತನಾಡಿದವನಲ್ಲ!!

ಯುದ್ಧದಲ್ಲಿ ಪಾಂಡವರು ಗೆಲ್ಲುತ್ತಾರೆ, ಆರರಲ್ಲಿ ಐದು ಮಕ್ಕಳು ಉಳಿಯುತ್ತಾರೆ. ಕುಂತಿಯ ಸ್ವಗತ 'ಅಯ್ಯೋ ಒಬ್ಬ ಮಗ ಮಡಿಯುತ್ತಾನೆಯೇ? ಯುದ್ಧ ನಿಲ್ಲಿಸ ಬಹುದೇ?'

ಯುದ್ಧ ನಿಲ್ಲಿಸಲು ಸಾಧ್ಯವಿಲ್ಲ

ಯುದ್ಧದ ನಂತರ ಧೃತರಾಷ್ಟ್ರ, ಗಾಂಧಾರಿ ವಾನಪ್ರಸ್ಥಾಶ್ರಮಕ್ಕೆ ಹೋಗುತ್ತಾರೆ! ಕುಂತಿಯ ಸ್ವಗತ 'ಅಯ್ಯೋ ಎಲ್ಲಾ ಕೌರವರು ಮಡಿಯುತ್ತಾರೆಯೇ? ಈ ವೃದ್ಧ ಕುರುಡರು ಕಾಡಿನಲ್ಲಿ ಹೇಗೆ ಜೀವನ ಸಾಗಿಸಿಯಾರು? ನಾನು ಸಹಾಯಕ್ಕೆ ನಿಲ್ಲಲೇ?'

ಹೋಗಿ ಬರುತ್ತೇನೆ ಅಮ್ಮಾ, ಆಶೀರ್ವಾದ ಮಾಡು ಎಂದು, ಕಾಲಿಗೆ ನಮಸ್ಕರಿಸಿ ಹೊರಟ! ಕುಂತಿ ಹೋಗಿಬಾ ಮಗನೆ ಎಂದು ಮನಃಪೂರ್ವಕವಾಗಿ ಆಶೀರ್ವಾದ ಮಾಡಿದಳು. ಹೊರಟವ ತಿರುಗಿ, 'ನಿನ್ನ ಮನಸ್ಸು ದೊಡ್ಡದು ತಾಯಿ, ನಿನಗೆ ವೃದ್ಧರು ಹೇಗೆ ಕಾಡಿನಲ್ಲಿ ಸಂಭಾಳಿಸುತ್ತಾರೆ ಅನ್ನುವ ಯೋಚನೆ. ಅವರ ಸಹಾಯಕ್ಕೆ ನಿಲ್ಲು' ಎಂದು ಹೇಳಿ ಹೊರಟುಹೋದ!!

ಕುಂತಿಗೆ ಮನಸ್ಸು ತಿಳಿಯಾಯ್ತು. ಈಗ ನಾಲ್ಕು ದಿನದ ಕೆಳಗೆ, ಕೃಷ್ಣ 'ಬಂದು ಭೇಟಿಮಾಡುತ್ತೇನೆ, ನಿನ್ನಿಂದ ಒಂದು ಸಹಾಯ ಆಗಬೇಕು ಅತ್ತೆ', ಎಂದು ಸಂದೇಶ ಕಳಿಸಿದ್ದ ದಿನದಿಂದ ಶುರುವಾಗಿದ್ದ ಮನಸ್ಸಿನ ದುಗುಡ, ಈಗ ತಿಳಿಯಾಯ್ತು!!
* ಮೈಸೂರು ವಿನ್ಯಾ*

ಮುಂದೆ, ಕುರುಕ್ಷೇತ್ರ ಯುದ್ಧದ ನಂತರ, ಧೃತರಾಷ್ಟ್ರ, ಗಾಂಧಾರಿ ವಾನಪ್ರಸ್ಥಾಶ್ರಮಕ್ಕೆ ಹೊರಟು ನಿಂತರು. ಅವರ ಜೊತೆ, ಕುಂತಿಯೂ ಹೊರಟು ನಿಂತಳು. ಪಾಂಡವರೆಲ್ಲರಿಗೂ ದುಃಖ. ಸಹದೇವ ದುಃಖ ಪಡಲಿಲ್ಲ!

*ಎಲ್ಲವನ್ನೂ ಬಲ್ಲವನಿಗೆ ಸುಖವೇನು, ದುಃಖವೇನು *

ವಿ.ಸೂ: ಇದು ಲೇಖಕನ ಅನಿಸಿಕೆ ಅಷ್ಟೇ, ಪುರಾವೆ ಕೇಳಬೇಡಿ, ಮಾತೃವಾತ್ಸಲ್ಯಕ್ಕೆ ಯಾವ ಪುರಾವೆ?

ಅಧಿಕ ಮಾಸ

ಉಷಾ ಗಣಪತಿ, *ನ್ಯೂಜೆರ್ಸಿ*

ಸಾಮಾನ್ಯವಾಗಿ ಪ್ರತಿ ಚಂದ್ರಮಾಸದಲ್ಲೂ ಒಂದು ಸಂಕ್ರಮಣ ಇದ್ದೆ ಇರುತ್ತದೆ. ಒಂದು ಸಂಕ್ರಮಣವು ಸಹ ಸಂಭವಿಸದ ಚಂದ್ರಮಾಸವನ್ನು ಅಧಿಕಮಾಸ ಅಥವಾ ಮಲಮಾಸವೆನ್ನುತಾರೆ. ಅಧಿಕಸ್ಯಾಧಿಕಂ ಫಲಂ ಸರಾಸರಿ ೩೩ ತಿಂಗಳಿಗೊಮ್ಮೆ ಬರುವ ಅಧಿಕಮಾಸವು ಬಹಳ ಮಹತ್ವವಾದುದು ಮತ್ತು ಸಾಧನೆಗೆ ದಾರಿ. ಇದರ ಮತೊಂದು ಹೆಸರು ಪುರುಷೋತ್ತಮ ಮಾಸ ಹಾಗು ಶ್ರೀ ಪುರುಷೋತ್ತಮ ರೂಪವು ಅಧಿಕ ಮಾಸದ ಅಧಿ ದೇವತೆ.

ಅಧಿಕ ಮಾಸದಲ್ಲಿ ಪೂಜೆ ಪುನಸ್ಕಾರಗಳಿಗೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ. ವಿಷ್ಣು, ಶಿವ ಮತ್ತು ಸೂರ್ಯ ದೇವನನ್ನು ಪೂಜಿಸುತ್ತಾರೆ. ಈ ಮಾಸಕ್ಕೆ ಹಿಂದೂ ಧರ್ಮದಲ್ಲಿ ಅಪಾರವಾದ ಮಹತ್ವವನ್ನು ನೀಡಲಾಗಿದೆ. ಈ ಅವಧಿಯಲ್ಲಿ ಭಕ್ತರು ಆಧ್ಯಾತ್ಮಿಕ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗುತ್ತಾರೆ. ಭಗವಾನ್ ವಿಷ್ಣುವು ಅಧಿಕ ಮಾಸದ ಅಧಿಪತಿ ಎನ್ನುವ ನಂಬಿಕೆಯಿದೆ..

೨೦೨೩ ರಲ್ಲಿ ಅಧಿಕ ಮಾಸವು ಜೂಲೈ ೧೮ ರಿಂದ ಪ್ರಾರಂಭವಾಗಿ ಆಗಸ್ಟ್ ೧೬ ರಂದು ಮುಕ್ತಾಯಗೊಂಡಿತು. ಈ ವರ್ಷ ಶ್ರಾವಣ ಮಾಸದಿಂದಾಗಿ ಅಧಿಕ ಮಾಸಕ್ಕೆ ವಿಶೇಷ ಮಹತ್ವವಿದೆ. ಇದು ೧೯ ವರ್ಷಗಳ ಅಂತರದ ನಂತರ ನಡೆಯುತ್ತಿರುವ ಬಾಹ್ಯಾಕಾಶಕ್ಕೆ ಸಂಬಂದಿಸಿದ ಘಟನೆಯಾಗಿದೆ. ಈ ಸಮಯವನ್ನು ತಮ್ಮ ಆಧ್ಯಾತ್ಮಿಕ ಪ್ರಯಾಣದಲ್ಲಿ ಕೆಲಸ ಮಾಡಲು ಮತ್ತು ತಮ್ಮ ಭಕ್ತಿಯನ್ನು ಬಲಪಡಿಸಲು ಬಯಸುವ ಭಕ್ತರಿಗೆ ಅತ್ಯಂತ ಮಂಗಳಕರ

ಈ ಸಮಯದಲ್ಲಿ ಭಕ್ತರು ತಮ್ಮ ಆಂತರಿಕ ಬೆಳವಣಿಗೆ ಮತ್ತು ಆಧ್ಯಾತ್ಮಿಕ ಉನ್ನತಿಗಾಗಿ ತೊಡಗಿಸಿ ಕೊಳ್ಳಲು ಅನುವು ಮಾಡಿಕೊಡುತದೆ. ಈ ತಿಂಗಳು ಉಪವಾಸ, ಪೂಜೆ, ಅರ್ಪಣೆ ದಾನ ಭಕ್ತಿ ಮತ್ತು ಮಂತ್ರ ಪಠಣದಿಂದ ತುಂಬಿರುತ್ತದೆ .

ಈ ಅಭ್ಯಾಸಗಳು ಅವರ ಆಲೋಚನೆಗಳನ್ನು ಶುದ್ಧಿಕರಿಸುತ್ತವೆ ಮತ್ತು ಅವರ ಸರ್ವಶಕ್ತ ದೇವರೊಂದಿಗೆ ಉತ್ತಮ ಸಂಪರ್ಕವನ್ನು ಮಾಡಲು ಸಹಕರಿಸುತ್ತದೆ.
ಈ ಮಾಸದಲ್ಲಿ ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡಿ ಪೂಜೆಗಳನ್ನು ಮಾಡುವುದರಿಂದ ಆದ್ಯಾತ್ಮಿಕ ಶಾಂತಿಯನ್ನು ಪಡೆಯಬಹುದು.

ವೂಡೂ: ಕಿರುಪರಿಚಯ

ಸರಿತಾ ನವಲಿ, *ನ್ಯೂಜೆರ್ಸಿ*

"ಬೆಳಿಗ್ಗೆಯಿಂದ ಮಗು ತುಂಬಾ ಹಟಮಾಡ್ತಾಯಿದೆ, ಅಳು ನಿಲ್ಲಿಸಿಯೇ ಇಲ್ಲ...ಮಗೂಗೆ ದೃಷ್ಟಿಯಾಗಿದೆಯೇನೋ? ಪೊರಕೆಕಡ್ಡಿಯಿಂದ ನಿವಾಳಿಸಿ ತೆಗೆದು, ದೃಷ್ಟಿಪರಿಹಾರದ ಮಂತ್ರ ಹೇಳಿಬಿಡ್ತೀನಿ" ಎನ್ನುವ ಮಾತನ್ನು ನಮ್ಮ ಅಜ್ಜಿ ಹೇಳುತ್ತಿದ್ದುದನ್ನು ಕೇಳಿದ್ದೇನೆ. ನಮ್ಮ ಹಳ್ಳಿಯಲ್ಲಿ ಹಾವು-ಚೇಳಿನಿಂದ ಕಚ್ಚಿಸಿಕೊಂಡವರ ಮೈಯಲ್ಲಿನ ವಿಷವನ್ನು ಮಂತ್ರ ಹಾಕಿ ತೆಗೆಯುವುದನ್ನು, ಗಿಡಮೂಲಿಕೆಯಿಂದ ತಯಾರಿಸಿದ ಔಷಧಿಗಳನ್ನು ಮಂತ್ರಿಸಿಕೊಟ್ಟು ರೋಗಪರಿಹಾರ ಮಾಡುವುದನ್ನೂ ನೋಡಿದ್ದೇನೆ. ಬಾಲ್ಯದಿಂದಲೂ ಆರೋಗ್ಯ ಸುಧಾರಿಸಲು, ಭಯಪರಿಹಾರವಾಗಲು ಮಂತ್ರಿಸಿದ ತಾಯಿತ ಕಟ್ಟಿಕೊಂಡಿರುವವರನ್ನು ನೋಡುತ್ತ ಬೆಳೆದಿದ್ದೇನೆ. ಹಾಗಾದರೆ ಇದೆಲ್ಲ ಮಾಟ-ಮಂತ್ರವೇ? ಪ್ರಕೃತಿಯನ್ನು, ಭೂತಪ್ರೇತಾದಿಗಳನ್ನು ರಹಸ್ಯ ರೀತಿಯಲ್ಲಿ ಅಧೀನದಲ್ಲಿಟ್ಟುಕೊಂಡು ಘಟನೆಗಳ ಗತಿಯನ್ನು ಮಾರ್ಪಡಿಸಲಾಗುವುದೆಂಬ ಅಭಿಪ್ರಾಯವುಳ್ಳ ವಿದ್ಯೆಯನ್ನು ಮಾಟ-ಮಂತ್ರವೆಂದು ಅರ್ಥೈಸಲಾಗಿದೆ. ಅನೈಸರ್ಗಿಕ ಅಥವಾ ಅಮಾನುಷ ವಿಧಾನಗಳಲ್ಲಿ ನೈಸರ್ಗಿಕ ವ್ಯಾಪಾರಗಳನ್ನು ನಿಯಂತ್ರಿಸುವ ಕ್ರಿಯೆಗೆ ಮಾಟವೆಂಬ ಅರ್ಥವೆಂದು ವಿಶ್ವಕೋಶವೊಂದರಲ್ಲಿ ತಿಳಿಸಲಾಗಿದೆ.

ಚಿತ್ರ ಕೃಪೆ: ಅಂತರ್ಜಾಲ stock.adobe.com

ಇದು ಬೇರೆ ಬೇರೆ ದೇಶಗಳಲ್ಲಿ ಬೇರೆ -ಬೇರೆ ರೀತಿಯಲ್ಲಿ ರೂಢಿಯಲ್ಲಿರುವುದನ್ನು ನೋಡುತ್ತೇವೆ. ಧರ್ಮದ ರೂಪದಲ್ಲಿರುವ ಜಾನಪದ ಮಾಟ-ಮಂತ್ರದ ಪದ್ಧತಿ, 'ವೂಡೂ' ಎಂಬ ಸಂಸ್ಕೃತಿಯಾಗಿ ಆಫ್ರಿಕಾದ ಮೂಲನಿವಾಸಿಗಳಲ್ಲಿ ರೂಢಿಯಲ್ಲಿದ್ದು, ಇಂದಿಗೂ ಅಮೆರಿಕಾದ ಕೆಲವು ರಾಜ್ಯಗಳಲ್ಲಿ ಆಚರಣೆಯಲ್ಲಿದೆ. 'ವೂಡೂ' ಎಂದಾಕ್ಷಣ ಮಾಟ-ಮಂತ್ರ, ಸ್ಮಶಾನ, ಆತ್ಮಗಳ ಆರಾಧನೆ, ರೌದ್ರ ನರ್ತನ, ಪ್ರಾಣಿಬಲಿ, ಸೂಜಿ ಚುಚ್ಚಿದ ಗೊಂಬೆಗಳು...ಹೀಗೆ ಭಯ ಹುಟ್ಟಿಸುವ ಆಚರಣೆಯಷ್ಟೇ ಆಗಿರದೆ, ಜವಾಬ್ದಾರಿಯುತ, ನೋವುನಿವಾರಕ, ಬದುಕಿಗೆ ವಿಶ್ವಾಸ ನೀಡುವ ಧಾರ್ಮಿಕ ಆಚರಣೆಯಾಗಿ, ಸಕಾರಾತ್ಮಕ ನಂಬಿಕೆಗಳನ್ನು ಪೀಳಿಗೆಯಿಂದ ಪೀಳಿಗೆಗೆ ಮುಂದುವರೆಸಿಕೊಂಡು ಹೋಗುವಲ್ಲಿ ಯಶಸ್ವಿಯಾಗಿದೆ.

'ವೂಡೂ' ಸಂಸ್ಕೃತಿಯನ್ನು ಪಶ್ಚಿಮ ಆಫ್ರಿಕಾದ ದಾಹೋಮಿಯನ್ ವೊಡನ್ ನಲ್ಲಿ ಬೇರೂರಿರುವ ಆಫ್ರಿಕನ್ ಮೂಲದ ಆಧ್ಯಾತ್ಮಿಕ ಜಾನಪದ ಪದ್ಧತಿಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ವೂಡೂವಿನ ಮೂಲವನ್ನು ನೂರಾರು ವರ್ಷಗಳ ಹಿಂದಿನಿಂದ ಆಫ್ರಿಕಾದಲ್ಲಿ ಕಾಣಬಹುದಾಗಿದ್ದು ಅಲ್ಲಿನ ಬುಡಕಟ್ಟು ಜನಾಂಗದ ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳಿಂದ 'ವೂಡೂ' ಬೆಳೆದು ಬಂದಿದೆ. ಅಮೆರಿಕಾದಲ್ಲಿ ಲೂಯಿಸಿಯಾನಾ ರಾಜ್ಯದಲ್ಲಿ ಹೆಚ್ಚಾಗಿ ಆಚರಣೆಯಲ್ಲಿ ಕಂಡುಬರುವ ಇದು 'ನ್ಯೂ ಆರಲೆನ್ಸ್ ವೂಡೂ', 'ಲೂಯಿಸಿಯಾನ ವೂಡೂ' ಎಂದು ಕರೆಸಿಕೊಂಡು ಇಲ್ಲಿ ನೆಲೆಸಿರುವ ಆಫ್ರಿಕಾ ಮೂಲದ ನಿವಾಸಿಗಳಿಂದ ಅಭಿವೃದ್ಧಿಪಡಿಸಿದ ಆಫ್ರೋ-ಅಮೆರಿಕನ್ ಧರ್ಮಗಳ ಸಾಂಸ್ಕೃತಿಕ ರೂಪವಾಗಿದೆ. ಮಿಸ್ಸಿಸ್ಸಿಪ್ಪಿ ಕಣಿವೆಯಲ್ಲಿ ಕಂಡುಬಂದ ಈ ಪದ್ಧತಿಯನ್ನು 'ಮಿಸ್ಸಿಸ್ಸಿಪ್ಪಿ ವೂಡೂ' ಎಂದೂ ಕರೆಯಲಾಗುತ್ತದೆ. ಆಫ್ರಿಕಾದೇಶದ ಜಾನಪದ ಸಂಪ್ರದಾಯವೊಂದು ಅಮೆರಿಕೆಯಲ್ಲಿ ನೂರಾರು ವರ್ಷಗಳಿಂದ ರೂಢಿಯಲ್ಲಿರುವುದನ್ನು ಈ ದೇಶದ ಇತಿಹಾಸದ ಪುಟಗಳಿಂದ ತಿಳಿದುಕೊಳ್ಳಬಹುದು.

ಮಿಸ್ಸಿಸ್ಸಿಪ್ಪಿ ಕಣಿವೆಯ ಪ್ರಾಂತ್ಯವು ಫ್ರೆಂಚ್ ವಸಾಹತುಶಾಹಿ ಆಡಳಿತದ ಅಧೀನದಲ್ಲಿದ್ದಾಗ ಪಶ್ಚಿಮ ಆಫ್ರಿಕಾದ ನಿವಾಸಿಗಳನ್ನು ಗುಲಾಮರಾಗಿ, ಸೆರೆಯಾಳುಗಳಾಗಿ ಕ್ರಿ.ಶ. 1717 ರಿಂದ 1721 ರವರೆಗೆ ಲೂಯಿಸಿಯಾನಕ್ಕೆ ಕರೆತರಲಾಯಿತೆಂಬ ಮಾಹಿತಿ ದೊರಕುತ್ತದೆ. ಹೀಗೆ ಆಫ್ರಿಕಾದ ಬೇರೆ-ಬೇರೆ ಭಾಗಗಳಿಂದ ಬಂದು ನೆಲೆಸಿದ ಜನರಲ್ಲಿದ್ದ ಸಾಂಸ್ಕೃತಿಕ ಆಚರಣೆಗಳು, ಭಾಷೆಗಳು, ಧಾರ್ಮಿಕ ಆಚರಣೆಗಳು, ಆತ್ಮ ಮತ್ತು ಪೂರ್ವಜರ ಆರಾಧನೆಯಲ್ಲಿ ಬೇರೂರಿದ್ದ ನಂಬಿಕೆಗಳೆಲ್ಲವೂ ಮುಂದುವರೆದು ವೂಡೂಸಂಪ್ರದಾಯ ಬೆಳೆದುಬಂದ ಮಾಹಿತಿಯನ್ನು ನೀಡುತ್ತವೆ. ತಮ್ಮನ್ನು ರಕ್ಷಿಸಿಕೊಳ್ಳುವುದರೊಂದಿಗೆ ಇತರರಿಗೆ ಹಾನಿ ಮಾಡುವ ಉದ್ದೇಶದಿಂದ ಗಿಡಮೂಲಿಕೆಗಳು, ವಿಷಗಳು, ಮಾಟ-ಮಂತ್ರ, ಮೋಡಿ ಮತ್ತು ತಾಯಿತಗಳ ಬಗ್ಗೆ ತಿಳಿವು ಈ ಜಾನಪದ ಸಂಪ್ರದಾಯದ ಪ್ರಮುಖ ಅಂಶಗಳಾಗಿರುವುದು ತಿಳಿದುಬರುತ್ತದೆ. ಪೂರ್ವಜರಿಗೆ ಪೂಜೆ ಸಲ್ಲಿಸುವುದನ್ನು ಮತ್ತು ಹಿರಿಯರಿಗೆ ಗೌರವ ನೀಡುವುದನ್ನು ವೂಡೂ ಆಚರಣೆಯಲ್ಲಿ ಕಾಣಬಹುದು. ಗೋಚರ ಮತ್ತು ಅಗೋಚರ ಜಗತ್ತುಗಳು ಒಂದಕ್ಕೊಂದು ಬೆಸೆದುಕೊಂಡಿರುವ ಬಗ್ಗೆ ನಂಬಿಕೆ ಹೊಂದಿರುವ ವೂಡೂವಾದಿಗಳು, ತಮ್ಮ ಪೂರ್ವಜರು ಮರಣ ಹೊಂದಿದ ನಂತರ ಗುಪ್ತ ಜಗತ್ತಿನಲ್ಲಿ ಪರಿವರ್ತನೆಗೊಂಡು ತಮ್ಮೊಂದಿಗೆ ಉತ್ಸಾಹದಿಂದ ಬೆರೆಯುತ್ತಾರೆ ಎಂದೇ ಪರಿಗಣಿಸುತ್ತಾರೆ. ಪೂರ್ವಜರನ್ನು ಪೂಜಿಸುವುದರೊಂದಿಗೆ ವೂಡೂವಾದಿಗಳು 'ಲೋವಾ' ಎಂಬ ಅತಿಮಾನಷ ಚೇತನ (ಆತ್ಮ)ವನ್ನು ಆರಾಧಿಸುತ್ತಾರೆ. ಗೋಚರ ಜಗತ್ತಿನಲ್ಲಿ ತಾವು ಇಚ್ಛಿಸುವ ಕಾರ್ಯಗಳಿಗಾಗಿ 'ಲೋವಾ' ಆತ್ಮದೊಂದಿಗೆ ಸಂಬಂಧವನ್ನು ಕಲ್ಪಿಸಿಕೊಳ್ಳುತ್ತಾರೆ.

ಚಿತ್ರ ಕೃಪೆ: ಅಂತರ್ಜಾಲ stock.adobe.com

ಲೂಯಿಸಿಯಾನಾ ವೂಡೂವಿನಲ್ಲಿ ಕ್ಯಾಥೋಲಿಕ್ ಸಂಪ್ರದಾಯದ ಸಂತರನ್ನು ಮತ್ತು ಸೈತಾನರನ್ನು ಪೂಜಿಸುವ ಪದ್ಧತಿ ಕಂಡುಬರುತ್ತದೆ. ಗುಲಾಮರಾಗಿ ಅಮೆರಿಕಾಗೆ ಬಂದ ಆಫ್ರಿಕಾ ನಿವಾಸಿಗಳು ಲೂಯಿಸಿಯಾನಾ ರಾಜ್ಯದಲ್ಲಿ ಫ್ರೆಂಚರ ಮಾಲೀಕತ್ವದಲ್ಲಿದ್ದ ಕಬ್ಬಿನ ಗದ್ದೆಗಳಲ್ಲಿ ಮತ್ತು ಸಕ್ಕರೆ ಕಾರ್ಖಾನೆಗಳಲ್ಲಿ ಕೆಲಸಗಾರರಾಗಿದ್ದರು. ಆಫ್ರಿಕಾದ ಮೂಲನಿವಾಸಿಗಳ ಧರ್ಮ ಮತ್ತು ಮಾಟ-ಮಂತ್ರ ಆಚರಣೆಯ ಬಗ್ಗೆ ತಿಳುವಳಿಕೆಯಿಲ್ಲದ ಫ್ರೆಂಚ್ ಮಾಲೀಕರು, ಅವರ ಮೇಲೆ ಕ್ಯಾಥೋಲಿಕ್ ನಂಬಿಕೆಗಳನ್ನು ಹೇರಿದ್ದಲ್ಲದೇ ಬಲವಂತದ ಧರ್ಮ ಪರಿವರ್ತನೆಯನ್ನೂ ಮಾಡುತ್ತಿದ್ದರು ಎಂಬ ಮಾಹಿತಿಯಿದೆ. ಇದರಿಂದಾಗಿ ಲೂಯಿಸಿಯಾನಾ ವೂಡೂವಿನಲ್ಲಿ ಪಶ್ಚಿಮ ಆಫ್ರಿಕಾದ ಜಾನಪದ ಸಂಪ್ರದಾಯದೊಂದಿಗೆ ಕ್ಯಾಥೋಲಿಕ್ ಧರ್ಮದ ನಂಬಿಕೆಗಳೂ ಬೆಸೆದುಕೊಂಡಿವೆ. ವೂಡೂ ಮತ್ತು ಕ್ಯಾಥೋಲಿಕ್ ನಂಬಿಕೆಗಳನ್ನು ಸಂಯೋಜಿಸಿ ನವೀಕರಿಸಿದ ವೂಡು ಸಂಪ್ರದಾಯವನ್ನು ಲೂಯಿಸಿಯಾನಾ ವೂಡೂ ಆಚರಣೆಯಲ್ಲಿ ನೋಡಬಹುದು. ಈ ಆಧ್ಯಾತ್ಮಿಕ ಜಾನಪದ ಪದ್ಧತಿಯಲ್ಲಿ ಪ್ರಾರ್ಥನಾ ಭಾಷೆಯಾಗಿ 'ಲೂಯಿಸಿಯಾನ ಕ್ರಿಯೋಲ್' ಮತ್ತು 'ಲೂಯಿಸಿಯಾನ ಫ್ರೆಂಚ್' ಭಾಷೆಗಳನ್ನು ಬಳಸುತ್ತಾರೆ. ವೂಡೂ ನಾಯಕರು ಮತ್ತು ವೂಡೂ ರಾಣಿಯರು ತಮ್ಮ ಸಮುದಾಯಗಳಲ್ಲಿ ಪ್ರಭಾವಿ ಪಾತ್ರವನ್ನು ಪಡೆದು, ಅನೇಕ ಧಾರ್ಮಿಕ ಸಭೆಗಳನ್ನು ಏರ್ಪಡಿಸಿ ಈ ಆಚರಣೆಯನ್ನು ಪ್ರಚಲಿತಗೊಳಿಸಿದ್ದಾರೆ. ಲೂಯಿಸಿಯಾನಾದ ನಿವಾಸಿಗಳು ತಮ್ಮ ದೈನಂದಿನ ಜೀವನದಲ್ಲಿ ತಾಯಿತಗಳ ಬಳಕೆ, ಮಾತ್ರಿಕ ಪುಡಿಗಳಿಂದ ಚಿಕಿತ್ಸೆ, ರಕ್ಷಣೆ, ಮಾರ್ಗದರ್ಶನ, ಶತ್ರುಗಳನ್ನು ನೋಯಿಸಲು ಮೋಡಿಯ ಬಳಕೆ ಮತ್ತು ತಮ್ಮ ಪ್ರೀತಿಪಾತ್ರದ ಜೊತೆಗೆ ಸಂಪರ್ಕವನ್ನು ಉಳಿಸಿಕೊಳ್ಳುವ ಪ್ರಯತ್ನ, ಹೀಗೆ ಅನೇಕ ಕಾರಣಗಳಿಂದ ವೂಡೂ ಅನುಯಾಯಿಗಳಾಗಿ ಮುಂದುವರೆದದ್ದನ್ನು ಕಾಣಬಹುದು.

ಗೌರಿ ಹಬ್ಬದ ವಿಶೇಷತೆ

ಡಾ. ಹೇಮಂತ್ ಚಿನ್ನು, *ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕರು. ಹಾಸನ*

ಕೃಪೆ

ಗೌರಿ ಹಬ್ಬಕ್ಕೆ ವಿಶೇಷ ಸ್ಥಾನವಿದ್ದು, ಗೌರಿ ಇಂದು ಭೂಮಿಗೆ ಬರುತ್ತಾಳೆ ಎಂಬ ನಂಬಿಕೆಯಿದ್ದು, ಗೌರಿಯನ್ನು ಭೂಮಿಯಲ್ಲಿ ಸ್ವಾಗತಿಸಲು ಗಣೇಶ ಬರುತ್ತಾನೆಂಬ ಪ್ರತೀತಿಯಿದೆ. ಉತ್ತರಾಂಚಲದಲ್ಲಿರುವ ಗೌರಿಕುಂಡ ವಿಶೇಷ ಸ್ಥಾನಮಾನ ಗಳಿಸಿದೆ. ಗೌರಿಕುಂಡದಲ್ಲಿರುವ ಬಿಸಿನೀರಿನ ಬುಗ್ಗೆ ವಿಶೇಷ ಮಹತ್ವ ಪಡೆದಿದೆ. ಈ ಬಿಸಿನೀರಿನ ಬುಗ್ಗೆಯಲ್ಲಿ ಗೌರಿ ಸ್ನಾನ ಮಾಡುವಾಗ ಗಣೇಶನನ್ನು ಸ್ನಾನದ ಕೋಣೆಯ ಹೊರಗೆ ನಿಲ್ಲಿಸಿದ್ದಳು. ಶಿವನು ಬಂದಾಗ ಗಣೇಶ ಶಿವನನ್ನು ಒಳಕ್ಕೆ ಬಿಡದೇ ತಡೆಯುತ್ತಾನೆ ಎಂಬ ಪೌರಾಣಿಕ ಕತೆಯಿದೆ. ಗೌರಿ ಕುಂಡದಲ್ಲಿ ಗೌರಿ ಹಬ್ಬದಂದು ಪವಾಡ ನಡೆಯುತ್ತದೆಂದು ನಂಬಿಕೆಯಿದೆ. ಭಕ್ತರ ಭಕ್ತಿಗೆ ಒಲಿದ ಗೌರಿ ತನ್ನ ಕಣ್ಣನ್ನು ತೆರೆದು ಭಕ್ತರಿಗೆ ದರ್ಶನ ನೀಡುತ್ತಾಳೆನ್ನುವುದು ಜನಜನಿತವಾಗಿದೆ.

ಗೌರಿ ಹಬ್ಬವನ್ನು ಗಣೇಶ ಚತುರ್ಥಿಗೆ ಮುಂಚಿನ ದಿನ ಆಚರಿಸಲಾಗುತ್ತದೆ. ಆದರೆ ಈ ಬಾರಿ ಗೌರಿ ಹಾಗೂ ಗಣೇಶ ಹಬ್ಬಗಳಿರಡೂ ಒಂದೇ ದಿನ ಬಂದಿವೆ. ಗಣೇಶ ಮತ್ತು ಸುಬ್ರಹ್ಮಣ್ಯನ ತಾಯಿ ಭಗವಾನ್ ಶಿವನ ಪತ್ನಿ ಗೌರಿ ತನ್ನ ಭಕ್ತರಿಗೆ ಶಕ್ತಿ, ಧೈರ್ಯ ತುಂಬುವ ಸಾಮರ್ಥ್ಯದಿಂದ ಪೂಜೆಗೆ ಅರ್ಹಳಾಗಿದ್ದಾಳೆ. ಎಲ್ಲಾ ದೇವತೆಗಳಿಗಿಂತ ಶಕ್ತಿಶಾಲಿ ದೇವತೆಯಾದ ಗೌರಿ ಆದಿ ಶಕ್ತಿ ಮಹಾಮಾಯಾ ಅವತಾರವೆಂದು ಪರಿಗಣಿಸಲಾಗಿದೆ.

ಭಾದ್ರಪದ ಮಾಸದ ತದಿಗೆಯ 13ನೇ ದಿನ ಗೌರಿಯನ್ನು ತನ್ನ ತಂದೆ, ತಾಯಿಗಳ ಮನೆಗೆ ಸ್ವಾಗತಿಸಲಾಗುತ್ತದೆ. ಮರು ದಿನ ಗೌರಿಯ ಪುತ್ರ ಗಣೇಶ ತಾಯಿಯನ್ನು ಕೈಲಾಸಕ್ಕೆ ಕರೆದುಕೊಂಡು ಹೋಗಲು ಭೂಮಿಗೆ ಆಗಮಿಸುತ್ತಾನೆ. ಸ್ವರ್ಣ ಗೌರಿ ವ್ರತವನ್ನು ಈ ಸಂದರ್ಭದಲ್ಲಿ ಭೂಲೋಕಕ್ಕೆ ಬಂದ ಗೌರಿಯನ್ನು ತೃಪ್ತಿಪಡಿಸಲು ಆಚರಿಸಲಾಗುತ್ತದೆ.

ಈ ದಿನ ಮಹಿಳೆಯರು ಮತ್ತು ಯುವತಿಯರು ಸಾಂಪ್ರದಾಯಿಕ ಉಡುಗೆ ತೊಡುಗೆ ಧರಿಸುತ್ತಾರೆ. ಅವರು ಜಲಗೌರಿ ಅಥವಾ ಅರಿಶಿನಗೌರಿಯ ಮೂರ್ತಿಗೆ ಪೂಜೆ ನೆರವೇರಿಸುತ್ತಾರೆ. ಗೌರಿ ಮೂರ್ತಿಯನ್ನು ಅಕ್ಕಿ ಅಥವಾ ಗೋಧಿ ಧಾನ್ಯದೊಂದಿಗೆ ತಟ್ಟೆಯಲ್ಲಿರಿಸಲಾಗುತ್ತದೆ. ವ್ರತದ ಪ್ರಕಾರ ಶುಚಿ ಮತ್ತು ಶ್ರದ್ಧೆಯಿಂದ ಪೂಜೆ ನೆರವೇರಿಸಲಾಗುತ್ತದೆ.

ಬಾಳೆಯ ಗೊನೆ ಮತ್ತು ಮಾವಿನ ಎಲೆಯಿಂದ ಅಲಂಕೃತವಾದ ಮಂಟಪವನ್ನು ಮೂರ್ತಿಯ ಸುತ್ತ ನಿರ್ಮಿಸಲಾಗುತ್ತದೆ. ಹತ್ತಿ, ರೇಶ್ಮೆ ವಸ್ತ್ರದಿಂದ, ಹೂವಿನ ಹಾರಗಳಿಂದ ಗೌರಿಯನ್ನು ಅಲಂಕರಿಸಲಾಗುತ್ತದೆ. ಮಹಿಳೆಯರು 16 ಗಂಟುಗಳ ಪವಿತ್ರ ಗೌರಿದಾರವನ್ನು ತಮ್ಮ ಬಲಗೈಗೆ ಕಟ್ಟಿಕೊಳ್ಳುತ್ತಾರೆ. ಇದು ಗೌರಿಯ ಆಶೀರ್ವಾದವೆಂದು ಭಾವಿಸುತ್ತಾರೆ.

ವ್ರತದ ಅಂಗವಾಗಿ 5 ಬಾಗಿನಗಳನ್ನು ಅರ್ಪಿಸಲಾಗುತ್ತದೆ. ಪ್ರತಿ ಬಾಗಿನವು ಅರಶಿನ, ಕುಂಕುಮ, ಕಪ್ಪು ಬಳೆಗಳು, ಕಪ್ಪು ಮಣಿಗಳು, ಬಾಚಣಿಗೆ, ಸಣ್ಣ ಕನ್ನಡಿ, ತೆಂಗು, ಬ್ಲೌಸ್ ಪೀಸ್, ಧಾನ್ಯ, ಅಕ್ಕಿ, ಗೋಧಿ, ರವೆ, ಬೆಲ್ಲ ಮುಂತಾದವು ಒಳಗೊಂಡಿರುತ್ತದೆ. ಒಂದು ಬಾಗಿನವನ್ನು ಗೌರಿ ದೇವತೆಗೆ ಅರ್ಪಿಸಲಾಗುತ್ತದೆ. ಉಳಿದ ಗೌರಿ ಬಾಗಿನಗಳನ್ನು ಮುತ್ತೈದೆಯರಿಗೆ ನೀಡಲಾಗುತ್ತದೆ.

ಗೌರಿ ಹಬ್ಬದ ಇನ್ನೊಂದು ವಿಶೇಷ ತವರು ಮನೆಯವರು ಗೌರಿ ಹಬ್ಬದ ಮಂಗಳದ್ರವ್ಯವನ್ನು (ತೌರ ಬಾಗಿನ) ತಮ್ಮ ಕುಟುಂಬದ ವಿವಾಹಿತ ಯುವತಿಯರಿಗೆ ಕಳಿಸುತ್ತಾರೆ. ಮಂಗಳದ್ರವ್ಯದ ಭಾಗವಾಗಿ ಹಣವನ್ನು ಕೂಡ ಕೆಲವರು ಕಳಿಸುತ್ತಾರೆ. ದಕ್ಷಿಣ ಭಾರತದಲ್ಲಿ ಹೋಳಿಗೆ, ಒಬ್ಬಟ್ಟು, ಪಾಯಸ, ಹುಗ್ಗಿ/ ಚಿತ್ರಾನ್ನ, ಬಜ್ಜಿ, ಕೋಸುಂಬರಿಯನ್ನು ಸಿದ್ಧಪಡಿಸಿ ದೇವರಿಗೆ ಅರ್ಪಿಸಲಾಗುತ್ತದೆ. ಭಗವಾನ್ ಗಣೇಶನ ಉತ್ಸವದಲ್ಲಿ ಕೂಡ ಈ ಆಚರಣೆ ಮುಂದುವರಿಯುತ್ತದೆ.



ಧರ್ಮಾಂಧತೆಯಿಂದ ಮನುಕುಲದ ನಾಶ

ಹರಿಕುಮಾರ್, *ನ್ಯೂಜೆರ್ಸಿ*

ಜಗತ್ತಿನ ಎಲ್ಲಾ ದೇಶಗಳಲ್ಲೂ ಮನುಷ್ಯನ ಹುಟ್ಟಿನಿಂದ ಅಂತ್ಯದವರೆಗೂ ಕಂಡುಬರುವ ಅನೇಕ ಆಚರಣೆಗಳಿವೆ, ಅವುಗಳಿಗೆ ಸಂಸ್ಕೃತಿ ಎಂದು ಹೆಸರು. ಈ ಸಂಸ್ಕೃತಿ ಬೆಳೆದು ಬಂದಿರುವುದು ಆಯಾ ಧರ್ಮಗಳಿಂದ, ಧರ್ಮಕ್ಕೆ ಬೇಡವಾದರೂ ಸಹ ಮನುಷ್ಯನಿಗೆ ಧರ್ಮದ ಅವಶ್ಯಕತೆ ಇದೆ. ಸಮತಾವಾದಿ ಯಾದ ಕಾರ್ಲ್ ಮಾರ್ಕ್ಸ್ ರವರು ಧರ್ಮವನ್ನು 'ಅಫಿಮು' ಎಂದು ಕರೆದಿದ್ದಾರೆ. ಕಾರ್ಲ್ ಮಾರ್ಕ್ಸ್ ನ ಈ ಮಾತು ಅಕ್ಷರಸಹ ನಿಜವಾಗಿದೆ. ಮನುಷ್ಯನಿಗಾಗಿ ಧರ್ಮವೇ ಹೊರತು ಧರ್ಮಕ್ಕೋಸ್ಕರ ಮನುಷ್ಯನಲ್ಲ.

ಚಿತ್ರ ಕೃಪೆ: ಅಂತರ್ಜಾಲ stock.adobe.com

ಧರ್ಮ ಎಂದರೆ ಸ್ವಭಾವ, ಕರ್ತವ್ಯ, ನಡವಳಿಕೆ, ನಿಯಮ ಧರ್ಮದ ವಿವಿಧ ಆಯಾಮಗಳು ರಾಜ ಧರ್ಮ, ಕ್ಷತ್ರಿಯ ಧರ್ಮ, ಗೃಹಸ್ಥ ಧರ್ಮ, ಸನ್ಯಾಸ ಧರ್ಮ, ಸ್ತ್ರೀ ಧರ್ಮ, ಪತಿ ಧರ್ಮ, ಎಂದು ಬಗೆಬಗೆಯ ನಿಯಮಗಳಿವೆ ಇದು ಕಾಲ ದೇಶಗಳಿಗೆ ಬದಲಾವಣೆಗೆ ಒಳಪಡುತ್ತದೆ.

ಧರ್ಮದ ಮೂಲವೇ ದಯೆ ಇನ್ನೂ ಧರ್ಮವನ್ನು ನಾವು ಕಾಪಾಡಿದರೆ ಧರ್ಮ ನಮ್ಮನ್ನು ಕಾಪಾಡುತ್ತದೆ, ಆದ್ದರಿಂದ 'ಧರ್ಮೋ ರಕ್ಷಕ ರಕ್ಷಿತಃ' ಎನ್ನುವುದು ಅಕ್ಷರಶಹ ಸತ್ಯವಲ್ಲವ. ಒಬ್ಬರನ್ನೊಬ್ಬರು ನೋಯಿಸಬಾರದು, ಮೋಸಗೊಳಿಸಬಾರದು ಅಥವಾ ನಿಂದಿಸಬಾರದು ಎಂಬ ಸಾರ್ವತ್ರಿಕ ನಿರೀಕ್ಷೆ ಇದೆ ಇದೇ ಉತ್ತಮ ಮೌಲ್ಯಗಳು. ವಿಕಾಸವೇ ಜೀವನ, ಸಂಕೋಚವೇ ಮರಣ, ಪ್ರೇಮವೆಲ್ಲ ವಿಕಾಸ, ಸ್ವಾರ್ಥವೆಲ್ಲ ಸಂಕೋಚ, ಆದುದರಿಂದ ಪ್ರೇಮವೇ ಬದುಕಿನ ಧರ್ಮ ಇದು 'ಸ್ವಾಮಿ ವಿವೇಕಾನಂದರ' ಧರ್ಮದ ಪರಿಕಲ್ಪನೆ.

ಇಂತಹ ವಿಶಾಲ ಅರ್ಥವನ್ನು ಪಡೆದುಕೊಂಡಿರುವ ಧರ್ಮವು ಸುಧರ್ಮವಾಗಿ ಬೆಳಗಿ ಪ್ರಪಂಚದಲ್ಲಿ ಸ್ಥಾಯಿಯಾಗಬೇಕು, ಆದರೆ ಮೂಢನಂಬಿಕೆ ಮನುಷ್ಯನ ದೊಡ್ಡ ಶತ್ರು ಇದಕ್ಕಿಂತಲೂ ಕೆಟ್ಟದ್ದು ಧರ್ಮಾಂಧತೆ, ಪ್ರತಿಯೊಂದು ಧರ್ಮವು ಕೆಲವು ಸ್ಥಿರ ಸಿದ್ಧಾಂತಗಳನ್ನು ಹಾಕುತ್ತವೆ ಮತ್ತು ಸಮಾಜವನ್ನು ಅಳವಡಿಸಿಕೊಳ್ಳುವಂತೆ ಒತ್ತಾಯಿಸಲು ಪ್ರಯತ್ನಿಸುತ್ತದೆ. ಧರ್ಮವು ಬೆಳಕಾಗಬೇಕು ಆದರೆ ಮನುಕುಲದ ಇಂದಿನ ಪೀಳಿಗೆಯವರು ಧರ್ಮವನ್ನು ಅಂಧಕಾರದ ಹಾದಿಗೆ ಕೊಂಡೊಯ್ಯುತ್ತಿದ್ದಾರೆ, ಇದರಿಂದ ಮನುಕುಲವೇ ವಿನಾಶದತ್ತ ಹಾಪ್ತುಗಾಲಿಡುತ್ತಿದೆ.



ಚಿತ್ರ ಕೃಪೆ: ಅಂತರ್ಜಾಲ stock.adobe.com

ಆದಿಮಾನವನಾಗಿದ್ದ ಮನುಷ್ಯ ನಿಸರ್ಗದಲ್ಲಿ ಏಕಾಂಗಿಯಾಗಿ ಗೆಡ್ಡೆ, ಗೆಣಸು ತಿನ್ನುತ್ತಾ ಮರದ ಪೋಟರೆಗಳಲ್ಲಿ ವಾಸ ಮಾಡುತ್ತಾ ಕಾಲ ಕಳೆಯುತ್ತಾ ಹಸಿ ಮಾಂಸವನ್ನು ಸೇವನೆ ಮಾಡುತ್ತಾ ಇರುವಾಗ ಒಮ್ಮೆ ಕಾಡ್ಗಿಚ್ಚಿನಿಂದಾಗಿ ಸುಟ್ಟ ಪ್ರಾಣಿಯ ಮಾಂಸವನ್ನು ತಿಂದು ರುಚಿಯ ಅನುಭವ ಆದಿಮಾನವನಿಗೆ ಆಗುತ್ತದೆ. ಈ ಬೆಳವಣಿಗೆಯಾಗಲು ಅವನಿಗೆ 300 ವರ್ಷಗಳ ಕಾಲ ಬೇಕಾಗಿತ್ತು ಏಕಾಂಗಿಯಾದ ಮಾನವನಿಗೆ ಗುಡುಗು - ಸಿಡಿಲು, ಹಗಲು - ರಾತ್ರಿಗಳು ಸಾಮಾನ್ಯವಾಗಿ ಭಯವನ್ನುಂಟು ಮಾಡಿವೆ. ಹಾಗಾಗಿ ಆದಿಮಾನವ ಸಂಘ ಜೀವಿಯಾಗಿ ಪರಿವರ್ತನೆ ಹೊಂದುತ್ತಾನೆ. ನದಿ ಬಯಲುಗಳನ್ನು ತಮ್ಮ ವಾಸಸ್ಥಾನವಾಗಿರಿಸಿಕೊಂಡು ಸಂಘ ಜೀವಿಯಾಗಿ ಬದುಕುತ್ತಾನೆ. ಈ ಜೀವನವೇ ಮುಂದೆ ಪ್ರಮುಖ ನಾಗರಿಕತೆಗಳಾದ ಸಿಂಧೂ ನಾಗರಿಕತೆ, ಹರಪ್ಪ ನಾಗರಿಕತೆ, ಮೀಸಪಟೋಮಿಯ ನಾಗರಿಕತೆ, ಚೀನಾ ನಾಗರಿಕತೆ ಹೀಗೆ ಮುಂತಾದ ನಾಗರಿಕತೆಗಳು ಜಗತ್ತಿನಾದ್ಯಂತ ಬೆಳೆದು ಬಂದದ್ದನ್ನು ನಾವು ಕಾಣಬಹುದು, ಈ ನಾಗರಿಕತೆಗಳ ಮೇಲೆ ನೈಸರ್ಗಿಕ ವಿಕೋಪಗಳು ಸಂಭವಿಸಿರಬಹುದು ಅಥವಾ ಅನ್ಯರ ಆಕ್ರಮಣ ನಡೆದಿರಬಹುದು, ಅನ್ಯರನ್ನು ಒಪ್ಪುವ ಮೂಲಕ ಒಂದು ನಾಗರಿಕತೆಯ ಜನಾಂಗ ಮತ್ತೊಂದು ನಾಗರಿಕತೆಯ ಜನಾಂಗವನ್ನು ಒಪ್ಪುವ ಅನಿವಾರ್ಯತೆ ಉಂಟಾಗುತ್ತಿತ್ತು ಅಥವಾ ಒಪ್ಪದೆ ಪಲಾಯನ ಮಾಡುವ ಅನಿವಾರ್ಯವೂ ಸಹ ಒದಗಿ ಬಂದಿದೆ ಇದು ನಾಗರಿಕತೆಗಳಲ್ಲಿ ಕಂಡುಬಂದಿರುವ ಸಂಸ್ಕೃತಿ ಅಥವಾ ಧರ್ಮದ ನಾಶ ಎಂದು ಅರಿಯಬಹುದು.

ಪ್ರಾಚೀನ ಕಾಲದಲ್ಲಿ ಭಾರತದಲ್ಲಿ ಹರಪ್ಪ ನಾಗರಿಕತೆ ಮತ್ತು ಸಿಂಧೂ ನಾಗರಿಕತೆಗಳು ಬೆಳೆದು ಬಂದಿರುವುದನ್ನು ನಾವು ನೋಡಬಹುದು. ಈ ನಾಗರಿಕತೆಗಳಲ್ಲಿ ಆರ್ಯರು ಮತ್ತು ದ್ರಾವಿಡರು ಎಂಬ ಎರಡು ಜನಾಂಗವನ್ನು ನಾವು ಕಾಣಬಹುದು, ಈ ನಾಗರಿಕತೆಗಳ ಮೂಲಕ 'ಹಿಂದೂ ಧರ್ಮ' ಅಥವಾ 'ಸನಾತನ ಧರ್ಮ' ನಿರ್ದಿಷ್ಟವಾಗಿ ಯಾವಾಗ ಉಗಮವಾಯಿತೆಂದು ತಿಳಿಯುವುದು ಸಾಧ್ಯವಾಗಿಲ್ಲ, ಏಕೆಂದರೆ ಇದಕ್ಕೆ ಯಾವುದೇ ಪುರಾವೆಗಳಿಲ್ಲ, ಈ ಹಿಂದೂ ಧರ್ಮದಲ್ಲಿ ಕಾಲ ನಂತರದಲ್ಲಿ ಅನೇಕ ಒಳಪಂಗಡಗಳು, ಜಾತಿ ವ್ಯವಸ್ಥೆಗಳು ನಿರ್ಮಾಣಗೊಂಡವು 'ಮೂರ್ತಿ ಪೂಜೆ'ಯನ್ನು ಪ್ರಮುಖವಾಗಿ ಕಾಣಬಹುದು.

ಸಾ.ಶ 570ರಲ್ಲಿ 'ಮಹಮ್ಮದ್ ಪೈಗಂಬರ'ರಿಂದ 'ಇಸ್ಲಾಂ' ಧರ್ಮ ಸ್ಥಾಪನೆಯಾಯಿತು. ಈ ಧರ್ಮ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಹೆಚ್ಚು ಪ್ರಚಾರ ಪಡೆಯಿತು. ಜಗತ್ತಿನ ಬಹುಪಾಲು ಮಂದಿ ಇಸ್ಲಾಂ ಧರ್ಮದ ಅನುಯಾಯಿಗಳು ಇದ್ದಾರೆ. ಇವರ ಪವಿತ್ರ ಸ್ಥಳ "ಮೆಕ್ಕಾ" ಈ ಧರ್ಮದ ಪ್ರಮುಖ ಆಚರಣೆಗಳು ಎಂದರೆ, ಕಲೀಮಾ, ನಮಾಜ್, ರೋಜಾ, ಜಕಾತ್, ಹಜ್ ಜಗತ್ತಿನಾದ್ಯಂತ ಇಸ್ಲಾಂ ಧರ್ಮದ ಆಚರಣೆ ಮಾಡುವವರು ಬಹುಪಾಲು ಮಂದಿ ಇದ್ದಾರೆ.

ಜೈನ ಧರ್ಮದ ಪ್ರಮುಖರಾದ 'ವರ್ಧಮಾನ ಮಹಾವೀರ'ರ ಉಗಮದೊಂದಿಗೆ 'ಜೈನ ಧರ್ಮ'ದ ಉಗಮವಾಗುತ್ತದೆ. ಇವರು ತಮ್ಮ ದೇಹವನ್ನು ದಂಡಿಸಿಕೊಳ್ಳುವ ಮೂಲಕ "ಕೈವಲ್ಯ" ಜ್ಞಾನವನ್ನು ಪಡೆದರು. ಇಂದ್ರಿಯಗಳನ್ನು ನಿಗ್ರಹಿಸಿ ಸುಖ ಹಾಗೂ ಯಾತನೆಗಳ ಮೇಲೆ ನಿಯಂತ್ರಣವನ್ನು ಸಾಧಿಸಿಕೊಂಡರು, ಇದರಿಂದ ಇವರನ್ನು 'ಮಹಾವೀರ' ಎಂದು ಕರೆಯಲಾಯಿತು. ಇದರಿಂದ ಇವರ ಈ ಸಾಧನೆಗಾಗಿ "ಜಿನ" ಎಂದು ಕರೆಯಲಾಯಿತು, ಜಿನ ಎಂದರೆ ಎಲ್ಲವನ್ನು ನಿಗ್ರಹಿಸಿದವನು ಎಂದರ್ಥ ವರ್ಧಮಾನರು ಪ್ರಮುಖ ಪಂಚ ಪ್ರತಿಜ್ಞೆಗಳನ್ನು ಮಾಡುತ್ತಾರೆ, ಅವುಗಳೆಂದರೆ ಅಹಿಂಸೆ, ಸತ್ಯ, ಅಸ್ತೇಯ, ಅಪರಿಗ್ರಹ, ಬ್ರಹ್ಮಚಾರ್ಯ ಈ ಧರ್ಮದ ಪ್ರಮುಖ ತ್ರಿರತ್ನಗಳೆಂದರೆ, ಸಮ್ಯಾಕ್ ಜ್ಞಾನ,ಸಮ್ಯಾಕ್ ದರ್ಶನ, ಸಮ್ಯಾಕ್ ಚಾರಿತ್ರ್ಯ ಇವುಗಳು ಪ್ರಧಾನವಾಗಿ ಇರುವಂತಹ ಧರ್ಮವೇ ಜೈನ ಧರ್ಮ. ಕನ್ನಡದ ಸುಪ್ರಸಿದ್ಧ ಕವಿಗಳಾದ ಪಂಪ, ಪೊನ್ನ, ರನ್ನ, ಜನ್ನ, ಈ ಹಳೆಗನ್ನಡ ಕವಿಗಳು ಸಹ ಜೈನ ಮತದವರೇ ಆಗಿದ್ದರು ಪಂಪ ಮತ್ತು ಪೊನ್ನ ಕವಿಯು ಹೌದು, ಕಲಿಯು ಹೌದು. ಈ ಜೈನ ಧರ್ಮವು ಕೂಡ ಉನ್ನತ ಮಟ್ಟದಲ್ಲಿ ಪ್ರಚಾರ ಪಡೆಯಿತು.

ಬೌದ್ಧ ಧರ್ಮದ ಸ್ಥಾಪಕ 'ಗೌತಮ ಬುದ್ಧ' ಬದುಕಿನ ನಶ್ವರತೆ ಕಂಡ ಗೌತಮ ಬುದ್ಧ ರಾಜ್ಯ, ಹೆಂಡತಿ, ಮಗನನ್ನು ಬಿಟ್ಟು ಹೊರಡುತ್ತಾನೆ. ನಂತರ ತಪಸ್ಸನ್ನು ಕೈಗೊಂಡು ಸಿದ್ಧಾರ್ಥನಾಗಿದ್ದವನು ಗೌತಮ ಬುದ್ಧನಾಗಿ ಪರಿವರ್ತನೆ ಗೊಳ್ಳುತ್ತಾನೆ, ಬುದ್ಧನು ಆಸೆಯ ವಿಮುಕ್ತಿಗಾಗಿ ಅಷ್ಟಾಂಗ ಮಾರ್ಗಗಳನ್ನು ಬೋಧಿಸಿದನು. ಅವುಗಳೆಂದರೆ ಒಳ್ಳೆಯ ನಡತೆ, ಒಳ್ಳೆಯ ಮಾತು, ಒಳ್ಳೆಯ ನೋಟ, ಒಳ್ಳೆಯ ಬದುಕು, ಒಳ್ಳೆಯ ಪ್ರಯತ್ನ, ಒಳ್ಳೆಯ ನೆನಪು, ಒಳ್ಳೆಯ ನಿರ್ಧಾರ, ಒಳ್ಳೆಯ ಚಿಂತನೆ, ಈ ಧರ್ಮವನ್ನು ಮುಂದೆ ಮೌರ್ಯ ಸಾಮ್ರಾಜ್ಯದ ಚಕ್ರವರ್ತಿಯಾದ ಅಶೋಕ ತನ್ನ ರಾಜ ಧರ್ಮವಾಗಿ ಸ್ವೀಕರಿಸುತ್ತಾನೆ. ಹಿಂಸಾ ಮಾರ್ಗದ ಮುಖಾಂತರ ತಾನು ಮಾಡಿದ ಕಳಿಂಗ ಯುದ್ಧದ ಬಗೆಗೆ ಪಶ್ಚಾತಾಪ ಪಡುತ್ತಾನೆ, ಶ್ರೀಲಂಕಾ ಹಾಗೂ ಬೇರೆ ದೇಶಗಳಿಗೆ ತನ್ನ ಮಕ್ಕಳಾದ ಸಂಘಮಿತ್ರೆ ಮತ್ತು ಮಹೇಂದ್ರ ಎಂಬುವರನ್ನು ಹಾಗೂ ತಮ್ಮ ಇನ್ನಿತರ ಅನುಯಾಯಿಗಳನ್ನು ಕಳುಹಿಸಿ ಬೌದ್ಧ ಧರ್ಮದ ಪ್ರಚಾರವನ್ನು ಮಾಡಿಸಿದನು.

ಈ ರೀತಿಯಾಗಿ ಜಗತ್ತಿನಾದ್ಯಂತ ಅನೇಕ ಧರ್ಮಗಳಾದ ಕ್ರೈಸ್ತ ಧರ್ಮ, ಪಾರ್ಸಿ ಧರ್ಮ ,ಸಿಖ್ ಧರ್ಮ, ಮುಂತಾದ ಧರ್ಮಗಳು ಚಾಲ್ತಿಯಲ್ಲಿವೆ.

ಧರ್ಮ ಎಂಬುದು ಮನುಷ್ಯನನ್ನು ಶೋಧಿಸಿ ಶುದ್ಧೀಕರಿಸುವ ಏಕೈಕ ಸಾಧನವಾಗಿದೆ. ಹಾಗಾಗಿ ಜಗತ್ತಿನಲ್ಲಿ ನಾನಾಧರ್ಮಗಳು ಉದಯ ಆಗಿರುವುದನ್ನು ನಾವು ಕಾಣಬಹುದು. ಮನುಷ್ಯನಿಂದ ನಿರ್ಮಿತವಾದ ಈ ಧರ್ಮಗಳು ಇಂದು ಮನುಷ್ಯ ಕುಲವನ್ನೇ ನಾಶಪಡಿಸಲು ಹೊರಟಿವೆ. ನಮ್ಮ ಪುರಾಣ ಕಥೆಯಲ್ಲಿ ಬರುವ ಭಸ್ಮಾಸುರನ ಕಥೆಯ ರೀತಿ ಧರ್ಮದಿಂದ ಮನುಷ್ಯ ತನ್ನ ಅವನತಿಯನ್ನು ತಾನೇ ತಂದುಕೊಳ್ಳುತ್ತಿರುವುದನ್ನು ನಾವು ಕಾಣಬಹುದು. ಧರ್ಮದ ಹೆಸರಿನಲ್ಲಿ ಯುದ್ಧಗಳನ್ನು ಮಾಡುತ್ತಾ ಮನಕುಲದ ನಾಶ ಮಾಡುತ್ತಿರುವುದನ್ನು ಕಾಣಬಹುದು. ದೇಶದ ಅಥವಾ ಧರ್ಮದ ಹೆಸರಿನಲ್ಲಿ ಇಂದು ಯುದ್ಧಗಳನ್ನು ಮಾಡುತ್ತಾ ರಾಷ್ಟ್ರಗಳ ನಿಮ್ಮದಿ ಹಾಗೂ ಸಂಪತ್ತನ್ನು ನಾಶ ಮಾಡುತ್ತಿದ್ದಾರೆ.

ಶ್ರೇಷ್ಠತೆಯ ವ್ಯಸನದಿಂದ ಅಂದರೆ ಜಗತ್ತಿನಲ್ಲಿ ನಾವೇ ಶ್ರೇಷ್ಠರು ಎಂಬ ಅಹಂನಿಂದ ಬೇರೆ ಜನಾಂಗವನ್ನು ಕೀಳಾಗಿ ನೋಡುತ್ತಾ ನಾಶಗೊಳಿಸಿದರು. ಗಡಿಗಳ ದುರಾಸೆಯಿಂದ ದೇಶದ ಪ್ರಮುಖ ನಾಯಕರು ತಮ್ಮ ಗಡಿಗಳನ್ನು ವಿಸ್ತರಿಸುವ ದುರಾಸೆಯಿಂದ ಯುದ್ಧಗಳನ್ನು ಮಾಡುತ್ತಾ ಮನುಕುಲವನ್ನು ನಾಶಗೊಳಿಸುತ್ತಿದ್ದಾರೆ. ದೇಶದ ಸೈನಿಕರು ಧರ್ಮದ ಅರಿವೇ ಇಲ್ಲದೆ ಗಡಿಗಳಲ್ಲಿ ನಿಂತು ಯುದ್ಧ ಮಾಡುತ್ತಾ ಮನುಕುಲದ ವಿನಾಶ ಮಾಡುತ್ತಿದ್ದಾರೆ. ಇದರಿಂದ ಜನಸಾಮಾನ್ಯರ ದಿನ ಬಳಕೆ ವಸ್ತುಗಳು ಹೆಚ್ಚು ದುಬಾರಿಯಾಗಿ ಯುವಜನತೆ ನಿರುದ್ಯೋಗ ಸಮಸ್ಯೆಯಿಂದ ಉದ್ಯೋಗವಿಲ್ಲದೆ ಅನ್ಯಮಾರ್ಗಗಳನ್ನು ಆಲೋಚಿಸುವ ಕ್ರಮಕ್ಕೆ ಮುಂದಾಗುತ್ತಿದ್ದಾರೆ, ಈ ರೀತಿಯಾಗಿ ಧರ್ಮಾಂಧತೆಗೆ ಒಳಗಾದ ಯಾವುದೇ ದೇಶ, ರಾಜ್ಯ ಅಭಿವೃದ್ಧಿಯಾಗಲು ಸಾಧ್ಯವಿಲ್ಲ. ಉದಾಹರಣೆಗೆ ಯುರೋಪ್ ಖಂಡದ ಬಹುಪಾಲು ದೇಶಗಳು 15ನೇ ಶತಮಾನದ ನಂತರ ಈ ಯುದ್ಧಗಳನ್ನು ಬಿಟ್ಟು ಶಾಂತಿ ಸುವ್ಯವಸ್ಥೆ ಅಭಿವೃದ್ಧಿಯ ಕಡೆಗೆ ಹೆಚ್ಚು ಗಮನ ನೀಡಿದವು. ಆದರೆ ತೃತೀಯ ಜಗತ್ತಿನ ರಾಷ್ಟ್ರಗಳು ಜಾತಿ ಧರ್ಮದ ಹೆಸರಿನಲ್ಲಿ ಯುದ್ಧಗಳನ್ನು ಮಾಡುತ್ತಾ ಮುಂದುವರಿದ ರಾಷ್ಟ್ರಗಳಲ್ಲಿ ಯುದ್ಧ ಶಸ್ತ್ರಾಸ್ತ್ರ ಪಡೆಯುವ ಖಾಯಂ ಗಿರಾಕಿಗಳಾಗಿದ್ದೇವೆ.

ಧರ್ಮ ಇರುವುದು ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು, ಮನುಷ್ಯ ಯಾವ ರೀತಿ ಬದುಕಬೇಕು, ಎಂಬುದನ್ನು ಹೇಳಲು ಹೊರತು ಧರ್ಮದಿಂದ ಮನುಕುಲ ನಾಶವಾಗಬಾರದು. ಉಗ್ರ ರಾಷ್ಟ್ರೀಯತೆ ಹಾಗೂ ಅಧಿಕಾರದ ದುರಾಸೆಯಿಂದ ಈ ಭೂಮಂಡಲದಲ್ಲಿ ಎರಡು ಮಹಾಯುದ್ಧಗಳು ಸಂಭವಿಸಿವೆ ಅಣುಬಾಂಬುಗಳ ಪ್ರಯೋಗಗಳು ಜೀವಿವೆ ಮುಂದೆ ಇಂತಹ ಯುದ್ಧಗಳು ಮರುಕಳಿಸದಂತೆ ಮನುಕುಲ ಜಾಗೃತಿ ವಹಿಸಬೇಕಾಗಿದೆ.

'ಜೀವನ' - ನನ್ನ ಸರಳ ಮಾತುಗಳಲ್ಲಿ

ಪವಿತ್ರ ರಾಜೀವ್ , *ನ್ಯೂಜೆರ್ಸಿ*

ಜೀವನವೆನ್ನೋದು ಒಂದು ದೋಣಿ ವಿಹಾರದ ಹಾಗೆ , ಆ ದೋಣಿನ ನಡೆಸೋಕೆ ಅಂತಾನೆ ಒಬ್ಬ ನಾವಿಕ ಇರ್ತಾನೆ . ಹಾಗೆ ನೀರಿನಲ್ಲಿ ಸಾಗ್ತಾ ಸಾಗ್ತಾ ಮುನ್ನಡೆಯೋವಾಗ ಅಲೆಗಳು ಒಂದಾದ್ಮೇಲೊಂದು ಅಪ್ಪಳಿಸ್ತಾ ಇರ್ತವೆ, ಆ ಅಲೆಗಳೇ ನಮ್ಮ ಭಾವನೆಗಳು.

ಒಮ್ಮೊಮ್ಮೆ ಆ ಅಲೆಗಳ ಅಬ್ಬರ ತಡಿಯದೇ ಹೆದ್ರಿಕೆಯಿಂದ ನೀರಿನಲ್ಲಿ ಬಿದ್ಬಿಡ್ತಿವೆನೋ ಅನ್ನೋ ಭಯದಿಂದ ನಾವಿಕನ್ನ ಬೈಕೊಂಡು ಸಾಗ್ತಿವಿ. ಅವನು ಚಾತುರ್ಯತೆಯಿಂದ ಅಲೆಗಳನ್ನ ಭೇದಿಸಿ ದೋಣಿ ನಡೆಸೋದನ್ನ ನೋಡಿ ಹೊಗಳಿಕೆನು ಕೊಡ್ತೀವಿ. ಆ ನಾವಿಕನೇ ದೇವರು , ಅವನ ಇಚ್ಛೆ ಇಲ್ದೆ ನಮ್ಮ ದೋಣಿ ಮುಂದೆ ಸಾಗುತ್ತ ಹೇಳಿ!!!

ದೋಣಿ ವಿಹಾರ ಮಾಡ್ತಾ ಸೂರ್ಯೋದಯ , ಸೂರ್ಯಾಸ್ತಗಳ ದೃಶ್ಯವನ್ನ ಕಣ್ಣು ತುಂಬಿಕೊಳ್ತಿವಿ. ಈ ಕ್ಷಣಗಳೇ ನಮ್ಮ ಸಂತೋಷ ಮತ್ತು ದುಃಖಗಳ ಪ್ರತಿಬಿಂಬವಾಗಿದೆ .ಇಷ್ಟು ಸುಲಭವಾಗಿ ಸೂರ್ಯಾಸ್ತ ಆದ್ರೆ ನಾಳೆ ಮತ್ತೆ ಸೂರ್ಯೋದಯ ಆಗೇ ಆಗುತ್ತೆ ಹಾಗೆ ಕಷ್ಟಗಳಾದ್ಮೇಲೆ ಸುಖಗಳು ಬಂದೇಬರುತ್ತೆ ಅನ್ನೋ ನಂಬಿಕೆಯಿಂದ ಈ ಜೀವನ ಅನ್ನೋ ಸಮುದ್ರನ ದಾಟುತ್ತ ಇದ್ದಿವಿ ಅಲ್ವಾ!!!

ದೋಣಿಯಲ್ಲಿ ನಮ್ಮ ಜೊತೆ ಸಹಪ್ರಯಾಣಿಕರು ಇರ್ತಾರೆ , ಅವರೇ ನಮ್ಮ ಕುಟುಂಬದವರು , ಸ್ನೇಹಿತರು ಮತ್ತು ಹಿತೈಯಿಷಿಗಳು. ಇವರೆಲ್ಲರ ಹಾರೈಕೆಗಳ ಸಂಗಡ, ತಂಪಾದ ಗಾಳಿ ಜೊತೆ , ಇಂಪಾದ ಸಂಗೀತ ಕೇಳ್ತಾ , ಕಷ್ಟಗಳಿಗೆ ಕಿರುನಗೆ ಬೀರಿ ಸುಖಗಳಿಗೆ ಅಪ್ಪುಗೆ ಕೊಡ್ತಾ ನಡೆಯೋಣ. ಏನಂತೀರಾ!!!

ಗಣೇಶ ಚತುರ್ಥಿ ವೈಶಿಷ್ಟ್ಯ

ಡಾ. ಹೇಮಂತ್ ಚಿನ್ನು, *ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕರು. ಹಾಸನ*

ಭಾರತದಲ್ಲಿ ವೈಭವದಿಂದ ಆಚರಿಸಲ್ಪಡುವ ಒಂದು ಹಬ್ಬ. ಪ್ರತಿ ವರ್ಷದ ಭಾದ್ರಪದ ಮಾಸದ ಶುಕ್ಲಪಕ್ಷದ ಚೌತಿಯ (ಚತುರ್ಥಿಯ) ದಿನ ಈ ಹಬ್ಬವನ್ನು ಆಚರಿಸಲಾಗುತ್ತದೆ. ಈ ಹಬ್ಬದಲ್ಲಿ ಗಣಪತಿಯನ್ನು ಪೂಜಿಸಲಾಗುತ್ತದೆ. ಬೆಳ್ಳಿ ಅಥವಾ ಮಣ್ಣಿನಿಂದ ಮಾಡಿದ ಗಣಪತಿಯ ಮೂರ್ತಿಯನ್ನು ವಿಧ್ಯುಕ್ತವಾಗಿ ಪೂಜಿಸಿ, ವ್ರತವೆಂದು ಆಚರಿಸಲಾಗುತ್ತದೆ. ಹಬ್ಬದ ದಿನ ಮೋದಕ, ಕಡುಬು ಎಂಬ ಸಿಹಿ ತಿಂಡಿಯನ್ನು ಮಾಡಿ ಗಣೇಶನಿಗೆ ನೈವೇದ್ಯ ಮಾಡಲಾಗುತ್ತದೆ..

ಪುರಾಣದಲ್ಲಿ

ಶಿವಪುರಾಣದಲ್ಲಿ ಹೇಳಿರುವಂತೆ ಗಣಪತಿಯನ್ನು ತುಳಸೀ ದಳದಲ್ಲಿ ಪೂಜಿಸಬಾರದು. ಏಕೆಂದರೆ ತುಳಸಿಯ ದರ್ಶನ ಮತ್ತು ಗಂಧಗಳು ಗಣೇಶ ದೇವರಿಗೆ ಸಂಬಂಧಪಟ್ಟ ಒಳಕೇಂದ್ರಗಳನ್ನು ಮುಚ್ಚುತ್ತವೆ. ಕೇತಕೀ ಪುಷ್ಪದ ಸ್ಪರ್ಶವು ಶಿವನ ದರ್ಶನಕ್ಕೆ ಸಂಬಂಧಪಟ್ಟ ಕೇಂದ್ರಗಳ ಪ್ರಭಾವವನ್ನು ಕಡಿಮೆ ಮಾಡುತ್ತದೆ. ಹಾಗೆಯೇ ಚೌತಿಯ ಚಂದ್ರನ ದರ್ಶನವೂ ಗಣೇಶನ ಉಪಾಸನೆಗೆ ಪ್ರತಿಬಂಧಕವಾಗಿದೆ.

ಸೂರ್ಯನು ಬುದ್ಧಿತತ್ವಕ್ಕೆ ಮತ್ತು ಚಂದ್ರನು ಮನಸ್ತತ್ವಕ್ಕೆ ದೇವತೆ. ಗಣೇಶನ ಆಳ್ವಿಕೆಗೆ ಒಳಪಟ್ಟಿರುವ ಇಪ್ಪತ್ತೊಂದು ತತ್ವಗಳಲ್ಲಿ ಕೊನೆಯದು ಮನಸ್ಸು. ಉಳಿದ ಇಪ್ಪತ್ತು ತತ್ವಗಳಾವುವೆಂದರೆ, ಪಂಚಭೂತಗಳು, ಪಂಚ ಕರ್ಮೇಂದ್ರಿಯಗಳು, ಪಂಚ ಜ್ಞಾನೇಂದ್ರಿಯಗಳು ಮತ್ತು ಪಂಚತನ್ಮಾತ್ರೆಗಳು. ಮನಸ್ಸನ್ನು ಸಂಯಮದಿಂದ ಒಳಗಿನ ಜ್ಞಾನಾಕಾಶದಲ್ಲಿ ಲಯಗೊಳಿಸಿದರೆ ಗಣೇಶನ ಮಹಿಮೆಯ ಅನುಭವ ಉಂಟಾಗುತ್ತದೆ.

ಗಣೇಶ ಚತುರ್ಥಿಯ ರಾತ್ರಿ ಇಂತಹ ಸಂಯಮದಲ್ಲಿದ್ದು ಭಗವಂತನ ನಿಜಸ್ವರೂಪವನ್ನು ಅನುಭವಿಸುತ್ತಾ ಆನಂದವಾಗಿರಬೇಕು. ಹಾಗೆ ಮಾಡದೇ ಅದನ್ನು ಹೊರಗಿನ ಆಕಾಶದಲ್ಲಿ ಕಾಣುವ ಚಂದ್ರರೂಪದಲ್ಲಿ ನೋಡುವುದರಲ್ಲಿ ಆಸಕ್ತಿ ಹೊಂದಿದರೆ, ಗಣೇಶನ ಮಹಿಮೆಯ ಅರಿವು ಉಂಟಾಗದೇ ಅವನ ರೂಪವನ್ನು ಹಾಸ್ಯಮಾಡುವ ದುರ್ಬುದ್ಧಿಯುಂಟಾಗುತ್ತದೆ.

ಗಣಪತಿ ಪೂಜೆ (ಕೆಲವು ಮಾಹಿತಿಗಳು)

ಗಣಾನಾಂ ತ್ವಾ ಗಣಪತಿಂ ಹವಾಮಹೇ, ಕವಿಂ ಕವೀನಾಂ ಉಪಮಶ್ರವಸ್ತಮಂ|

ಜ್ಯೇಷ್ಠ ರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತ ಆನ:ಶೃಣ್ವನ್ ಊತಿಭಿ: ಸೀದ ಸಾಧನಂ||

(ಯಜುರ್ವೇದ ಸಂಹಿತೆ)

ತ್ವಮೇವ ಕೇವಲಂ ಕರ್ತಾಸಿ

ತ್ವಮೇವ ಕೇವಲಂ ಧರ್ತಾಸಿ

ತ್ವಮೇವ ಕೇವಲಂ ಹರ್ತಾಸಿ

ತ್ವಮೇವ ಸರ್ವಂ ಖಲ್ವಿದಂ ಬ್ರಹ್ಮಾಸಿ

ತ್ವಂ ಸಾಕ್ಷಾದಾತ್ಮಾಸಿ ನಿತ್ಯಂ

ತ್ವಂ ಬ್ರಹ್ಮಾ ವಿಷ್ಣುಸ್ತ್ವಂ ರುದ್ರಸ್ತ್ವಂ ಇಂದ್ರಸ್ತ್ವಂ ಅಗ್ನಿಸ್ತ್ವಂ ವಾಯುಸ್ತ್ವಂ ಸೂರ್ಯಸ್ತ್ವಂ ಚಂದ್ರಮಾಸ್ತ್ವಂ ಬ್ರಹ್ಮಭೂರ್ಭುವಸ್ಸುವರೋಮ್ - 'ಗಣೇಶಾಥರ್ವಶೀರ್ಷ'ದಲ್ಲಿ ಅತನನ್ನು ಹೀಗೆ ವರ್ಣಿಸಲಾಗಿದೆ.

ಗಣೇಶನ ಹುಟ್ಟು

ಯಾಜ್ಞವಲ್ಕ್ಯ ಸ್ಮೃತಿಯ ಪ್ರಕಾರ ಅಂಬಿಕೆಯು ಗಣಪತಿಯ ತಾಯಿ. ಇನ್ನೊಂದು ಕಥೆಯ ಪ್ರಕಾರ ಅತನು ಪಾರ್ವತಿಯ ಮೈಯಿಂದ ಹುಟ್ಟಿದವನು. ಸ್ವರ್ಣಗೌರಿಯ ಮಾನಸ ಪುತ್ರ ಈತ. ಗೌರಿ ತನ್ನ ಮೈಕೊಳೆಯಿಂದ ಆಕೃತಿಯೊಂದನ್ನು ಸೃಷ್ಟಿಸಿ ಅದಕ್ಕೆ ಜೀವತುಂಬಿ ಸ್ನಾನ ಮಾಡಲು ಹೋಗಿರುತ್ತಾಳೆ. ತಾಯಿಯ ಆಣತಿಯಂತೆ ಗಣಪ ಮನೆಯನ್ನು ಕಾಯುತ್ತಿರುತ್ತಾನೆ. ಶಿವನು ಮನೆಗೆ ಹಿಂತಿರುಗಿದಾಗ, ಗಣಪ ಅವನನ್ನು ತಡೆದು ಮನೆಯೊಳಗೆ ಹೋಗಲು ಅಡ್ಡಿಪಡಿಸುತ್ತಾನೆ.

ಇದರಿಂದ ಕುಪಿತಗೊಂಡ ಶಿವ ತನ್ನ ತ್ರಿಶೂಲದಿಂದ ಅವನ ಶಿರವನ್ನು ಕತ್ತರಿಸುವನು. ಸ್ನಾನ ಮುಗಿಸಿ ಬಂದ ಗೌರಿ ಮಗನ ಕಳೇಬರ ಕಂಡು ರೋದಿಸುತ್ತಾಳೆ. ಹೆಂಡತಿಯನ್ನು ಸಮಾಧಾನ ಪಡಿಸುವ ಸಲುವಾಗಿ ಶಿವ ತನ್ನ ಗಣಗಳನ್ನು ಕರೆದು ಉತ್ತರ ದಿಕ್ಕಿಗೆ ಯಾರಾದರೂ ತಲೆ ಹಾಕಿ ಮಲಗಿದ್ದರೆ, ಅಂತಹವರ ತಲೆಯನ್ನು ಕತ್ತರಿಸಿ ತರುವಂತೆ ಆಜ್ಞಾಪಿಸುತ್ತಾನೆ.

ಅವರು ಉತ್ತರ ದಿಕ್ಕಿನಲ್ಲಿ ಮಲಗಿದ್ದ ಮರಿಯಾನೆ ತಲೆಯನ್ನು ಕತ್ತರಿಸಿ ತರುತ್ತಾರೆ. ನಂತರ ಅದನ್ನು ಗಣಪನ ಶರೀರಕ್ಕೆ ಅಂಟಿಸುವರು. ಹೀಗಾಗಿ ಗಣಪ ಗಜಮುಖನಾಗಿ, ಗಣಗಳ ಅಧಿಪತಿ ಮತ್ತು ಮೊದಲ ಅಗ್ರಪೂಜೆಗೆ ಅರ್ಹನಾಗುತ್ತಾನೆ. ವಿಘ್ನ ವಿನಾಶಕ ವಿನಾಯಕನಾಗಿರುವನು.

ಗಣೇಶನ ಹಬ್ಬ

ಮೊದಲ ದಿನ ತಾಯಿ ಸ್ವರ್ಣಗೌರಿಯ ಹಬ್ಬ. ಮಾರನೆ ದಿನವೇ ಗಣೇಶನ ಹಬ್ಬ. ತಾಯಿಯನ್ನು ಮರಳಿ ಕರೆದುಕೊಂಡು ಹೋಗುವ ಕೆಲಸ ಗಣಪನದಾಗಿರುವುದರಿಂದ, ತಾಯಿ ಭೂಲೋಕಕ್ಕೆ ಬಂದ ಮಾರನೆ ದಿನವೇ ಅಜ್ಜಿ ಮನೆಗೆ ಬಂದು, ಅಜ್ಜಿ ಮನೆಯಲ್ಲಿ ಮಾಡಿದ ವಿವಿಧ ಭಕ್ಷ್ಯ ಭೋಜನಗಳನ್ನು ಭಕ್ಷಿಸಿ ತಾಯಿಯೊಂದಿಗೆ ಹಿಂತಿರುಗುತ್ತಾನೆ. ಆದರೆ ಈ ಬಾರಿ ಒಂದೇ ದಿನಕ್ಕೇ ಗೌರಿಯನ್ನು ಭೂಲೋಕದಿಂದ ಕರೆದುಕೊಂಡು ಹೋಗಲಾಗುತ್ತದೆ.

ಗಣೇಶನ ಹಬ್ಬದ ವೈಶಿಷ್ಟ್ಯತೆಗಳು

ನಮ್ಮ ದೇಶದಲ್ಲಿ ಗಣಪತಿಯ ಪೂಜೆಯು ಅನಾದಿ ಕಾಲದಿಂದಲೂ ನಡೆದು ಬಂದಿದೆ. ಆನೆಗಳ ಹಿಂಡು ಹೊಲ ಗದ್ದೆಗಳಿಗೆ ನುಗ್ಗಿ ಬೆಳೆಯನ್ನು ಹಾಳು ಮಾಡುವುದನ್ನು ತಡೆಯುವ ಸಲುವಾಗಿ ರೈತಾಪಿ ಜನಗಳು ಆನೆಯ ಮುಖವುಳ್ಳ ದೇವನನ್ನು ಪೂಜಿಸಿದರೆ, ಗೋದಾಮುಗಳಲ್ಲಿ ಧಾನ್ಯಗಳನ್ನು ತಿಂದು ಹಾಳು ಮಾಡುವ ಇಲಿಗಳನ್ನೂ ಪೂಜಿಸಿ ಇಬ್ಬರನ್ನೂ ಸಮಾಧಾನಿಸುವುದೂ ಹಬ್ಬದ ಒಂದು ಕಾರಣವೆಂದು ಕೆಲವರು ಹೇಳುವರು.

ಅದಲ್ಲದೇ ಹೊಲಗಳಲ್ಲಿ ನಿಲ್ಲಿಸುವ ಬೆರ್ಚಪ್ಪನಿಗೂ ಗಣಪತಿಯಂತೆ ಡೊಳ್ಳು ಹೊಟ್ಟೆಯನ್ನು ಮಾಡಿರುತ್ತಾರೆ. ಇದಲ್ಲದೇ ಗಣಪತಿಯನ್ನು ಬರ್ಮಾ, ಮಲೇಶಿಯಾ, ಇಂಡೋನೇಶಿಯಾ, ಚೀನಾ, ಸುಮಾತ್ರಾ, ಜಾವಾ, ಜಪಾನ್ ಮತ್ತಿತರ ದೇಶಗಳಲ್ಲಿಯೂ ಪೂಜಿಸುತ್ತಾರೆ. ವಿಜ್ಞಾನಿಗಳ ಸೃಷ್ಟಿಯ ವಿಕಾಸಕ್ಕೂ ನಮ್ಮ ಪುರಾಣಗಳಲ್ಲಿ ಹೇಳುವ ದಶಾವತಾರ ಕಥೆಗಳಿಗೂ ಹೋಲಿಕೆಯುಂಟು.

ಮೊದಲಿಗೆ ನೀರಿನಲ್ಲಿರುವ ಅವತಾರಗಳಾದರೆ, ನಂತರ ಅರ್ಧ ಪ್ರಾಣಿ ಅರ್ಧ ಮನುಷ್ಯ. ಇದರಲ್ಲಿ ಗಣಪತಿಯೂ ಒಂದಾಗಿದೆ. ಗ್ರೀಕರ ಕಲ್ಪನೆಯಲ್ಲಿಯೂ ಇಂತಹ ಉದಾಹರಣೆಗಳಿವೆ. ಗಣಪತಿಯ ಮೂರ್ತಿಯ ಪೂಜೆಗೆ ಮೊದಲು ಸಗಣಿಯಿಂದ ಮಾಡಿ ಅದರ ಮೇಲೆ ಗರಿಕೆಯನ್ನಿಟ್ಟು ಅದನ್ನು ಪಿಳ್ಳೇರಾಯನೆಂದು ಕರೆದು ಅದಕ್ಕೆ ಪೂಜಿಸುವರು. ಮಿಕ್ಕೆಲ್ಲ ದೇವರುಗಳಂತೆ ಇದಕ್ಕೂ ಷೋಡಶಾಂಗ ಪೂಜಾವಿಧಾನದ ರೀತ್ಯಾ ಪೂಜಿಸುವರು.

ಪೂಜೆಯ ನಂತರ ಹತ್ತುದಿನಗಳ ವರೆಗೆ ನಿತ್ಯ ಪೂಜೆಯನ್ನು ಮಾಡಿ ೧೦ನೆಯ ದಿನ ಅಂದರೆ ಅನಂತ ಚತುರ್ದಶಿಯ ದಿನದಂದು ವಿಸರ್ಜನೆ ಮಾಡುವರು. ದೇಶದ ವಿವಿಧೆಡೆ ವಿವಿಧ ರೀತಿಯಲ್ಲಿ ಗಣಪತಿಯ ಹಬ್ಬವನ್ನಾಚರಿಸುವರು. ದಕ್ಷಿಣ ದೇಶದಲ್ಲಿ ಮನೆ ಮನೆಗಳಲ್ಲಿ ಗಣಪತಿಯ ಮೂರ್ತಿಗೆ ಪೂಜಿಸಿದರೆ, ಮಹಾರಾಷ್ಟ್ರದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಜನಗಳನ್ನು ಒಗ್ಗೂಡಿಸಲು ಆರಂಭಿಸಿದ ಸಾರ್ವಜನಿಕ ಗಣಪತಿ ಪೂಜೆ ಇಂದಿಗೂ ಹಾಗೆಯೇ ಮುಂದುವರೆಯುತ್ತಿದೆ.

"ಏಕದಂತಾಯ ವಿದ್ಮಹೇ ವಕ್ರತುಂಡಾಯ ಧೀಮಹಿ ತನ್ನೋ ದಂತಿ: ಪ್ರಚೋದಯಾತ್"

ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಅತ್ಯಂತ ವಿಜೃಂಭಣೆಯಿಂದ ಈ ಹಬ್ಬವನ್ನು ಆಚರಿಸುತ್ತಾರೆ. ಕರಾವಳಿ ಪ್ರದೇಶದಲ್ಲಿ ತನ್ನದೇ ಆದ ಪರಂಪರೆ ಹೊಂದಿದೆ. ಇಲ್ಲಿ ಡೊಳ್ಳು ಕುಣಿತ, ಹುಲಿವೇಷ, ಯಕ್ಷಗಾನ ಮುಂತಾದವು ಇಲ್ಲಿನ ಗಣೇಶೋತ್ಸವಕ್ಕೆ ಮೆರಗು ತರುತ್ತದೆ. ಕುಂದಾಪುರ, ಶಿರೂರು, ಮಂಗಳೂರು, ಉಡುಪಿ ಮುಂತಾದ ಕಡೆಯಲ್ಲಿ ಸುಂದರವಾದ ಸಂಭ್ರಮದ ಗಣೇಶ ಚತುರ್ಥಿ ನಡೆಯುತ್ತದೆ.

ಪ್ರವಾಸ ಕಥನ

ಶ್ರಾವಣ ಸಂಧ್ಯಾ

ಮಾಯಾ ನಗರಿಯಲ್ಲೊಂದು ಸಾಂಸ್ಕೃತಿಕ ವೇದಿಕೆ

ವಿನಯ್ ಕುಮಾರ್ ಜಾನಕಿರಾಮ್, *ಮೈಸೂರು*

ಲಾಸ್ ವೇಗಸ್ ಅಂದರೆ ಸ್ಪೇನ್ ಭಾಷೆಯಲ್ಲಿ ಹುಲ್ಲುಗಾವಲು ಅಂತರ್ಥ! ರಫಾಯೆಲ್ ರಿವೆರಾ ಎಂಬ ಸ್ಪೇನ್ ನ ವ್ಯಾಪಾರಿ, ಮರುಭೂಮಿಯಲ್ಲಿ ಕಂಡಂತಹ ಹುಲ್ಲುಗಾವಲು ಇದು, ಹಾಗಾಗಿ ಈ ಹೆಸರು. ಕೊಲೆರಡೋ ನದಿಗೆ ಆಣೆಕಟ್ಟನ್ನು ಕಟ್ಟಿ ವಿದ್ಯುತ್ ಶಕ್ತಿ ಉತ್ಪಾದನೆ ಮಾಡಲು ಅಮೇರಿಕಾ ಪ್ರೆಸಿಡೆಂಟ್ ಹೂವರ್ ನಿರ್ಧಾರ ಮಾಡುತ್ತಾರೆ. ಅದು ಜಗತ್ತಿನಲ್ಲೇ ಆ ಕಾಲಘಟ್ಟಕ್ಕೆ ಕ್ಲಿಷ್ಟವಾದ ಹಾಗು ವಿಶೇಷತೆ ಉಳ್ಳಂತಹ ಆಣೆಕಟ್ಟು. ಇದರ ವಿನ್ಯಾಸ ಇಂದಿಗೂ ವಿಶೇಷವೇ. ಇದೊಂದು ಮರುಭೂಮಿಯಲ್ಲಿ ನಿರ್ಮಿಸ ಬೇಕಿದ್ದ ಆಣೆಕಟ್ಟು. ಈ ಭೂಪ್ರದೇಶಕ್ಕೆ, ಆಣೆಕಟ್ಟು ಕಟ್ಟಲು, ಕೆಲಸಗಾರರನ್ನು ತರಲು ಪಾಡು ಪಡಬೇಕಾಯಿತು. ಕೆಲಸಗಾರರ ವಸತಿಗೆ ಹಾಗು ಮನರಂಜನೆಗೆಂದು ಹೊಸವಸ್ತ್ರ ಹೊದ್ದು ನಿಂತ ನಗರಿಯೇ ಲಾಸ್ ವೇಗಸ್!



ಬೆವರಿಳಿಸಿ ದುಡಿಯುವ ಕೆಲಸಗಾರರಿಗೆ ಸಂಜೆಗೆ ಇರುತ್ತಿದ್ದ ಮನರಂಜನೆ ಎಂದರೆ ಜೂಜು, ಹೆಂಡ, ವೇಶ್ಯಾವಾಟಿಕೆ, ನಾಟಕ, ನೃತ್ಯ, ಸಿನಿಮಾ, ಸರ್ಕಸ್ ಹೀಗೆ ಹತ್ತು ಹಲವು ಆಯಾಮಗಳು. ಮುಂದೆ ಕೆಲಸಗಾರರು ತಮ್ಮ ಕೆಲಸ ಮುಗಿಸಿ ತರಳಿದರು, ಆದರೆ ಲಾಸ್ ವೇಗಸ್ ಮಾತ್ರ ನಿತ್ಯ ಸುಮಂಗಲಿಯಾಗಿ ಅಂದಿಗೂ, ಇಂದಿಗೂ ಜನರನ್ನು ತನ್ನ ಬಳಿಗೆ ಆಕರ್ಷಿಸುತ್ತಿದೆ. ಇದಕ್ಕೆ ಹಲವು ಕಾರಣಗಳು.
1980ರ ದಶಕದಲ್ಲಿ ಇದೊಂದು ಜೂಜು ಅಡ್ಡವಾಗಿತ್ತಂತೆ, ಆಗ ಪ್ರಪಂಚದ ದೊಡ್ಡ ದೊಡ್ಡ ವಾಣಿಜ್ಯ ಸಂಸ್ಥೆಗಳು, ಇಲ್ಲಿ ಉತ್ಕೃಷ್ಟ ವಸತಿ ವ್ಯವಸ್ಥೆ ಕೊಡಲು ತೀರ್ಮಾನಿಸಿ, ತಮ್ಮ ಸುಪರ್ದಿಗೆ ಈ ವ್ಯವಸ್ಥೆಯನ್ನು ತೆಗೆದುಕೊಂಡರಂತೆ. ಹಾಗಾಗಿ ಹಲವಾರು ದೊಡ್ಡ ದೊಡ್ಡ ಹೋಟೆಲ್ ಗಳು ಉದ್ಭವವಾದುವು. ವಸತಿ ವ್ಯವಸ್ಥೆಯನ್ನು ವಿಶಿಷ್ಟ ರೀತಿಯಲ್ಲಿ ನಿರ್ಮಿಸಲಾಗಿದೆ. ವಿನಿಷಿಯಾ - ವೆನ್ನಿಸ್ ನಗರವನ್ನು ಹೋಲುತ್ತದೆ, ಟ್ರೆಷರ್ ಐಲ್ಯಾಂಡ್ - ವಾಲ್ಟ್ ಡಿಸ್ನಿಯ ಕಥೆಯ ಸೊಗಡು.

ನನ್ನಂತಹ ಹಲವರಿಗೆ ಲಾಸ್ ವೇಗಸ್ ಎಂದರೆ, ಅದೊಂದು ಜೂಜುಕೋರರ ತಂಗುದಾಣವೆಂಬ ಅನಿಸಿಕೆ. ಆದರೆ ಇಲ್ಲಿ ಜಗತ್ತಿನಲ್ಲೇ ಉತ್ಕೃಷ್ಟ "performing art" ಪ್ರದರ್ಶನ ಕಲೆಯ ಸರಣಿಗಳಿವೆ!
ನಾನು ಆರಿಸಿಕೊಂಡದ್ದು "Cirque du soleil" ಎಂಬ ಪ್ರದರ್ಶನ, ಅದು ನಡೆಯುವುದು "O-Theater Bellagio" ನಲ್ಲಿ.

"Cirque du soleil" ಎಂಬುದೊಂದು ಸರ್ಕಸ್ ಕಂಪನಿ. ಮೈಸೂರಿನವರಿಗೆ ದಸರಾ ಬಂತೆಂದರೆ, ಬಹಳಷ್ಟು ವಿಶೇಷಗಳ ಜೊತೆಗೆ, ಸರ್ಕಸ್ ಬರುತಿತ್ತು. ಚಾಮುಂಡಿಬೆಟ್ಟದ ತಪ್ಪಲಿನಲ್ಲೇ ಇದರ ಬಿಡಾರ. ಸಂಜೆ ಹಾಗು ರಾತ್ರಿ ಒಂದು ಬೀಮ್ ಲೈಟ್ ಬಿಡೋರು, ಅದರ ಕಿರಣಗಳು ಬಾನಂಗಳವನ್ನು ಬೆಳಗಿಸಿ, ಇಡೀ ಮೈಸೂರಿಗೇ ಕಾಣುತ್ತಿತ್ತು. ಸರ್ಕಸ್ ನಲ್ಲಿ ಬೇರೆ ಬೇರೆ ಪ್ರದರ್ಶನ ಕಲೆಗಳಿದ್ದರೂ, ಮೈ ನವಿರೇಳಿಸುವ ಪ್ರದರ್ಶನ ವೆಂದರೆ "trapeze" - ಹಗ್ಗದ ಉಯ್ಯಾಲೆಯ ಪಲ್ಟಿಗಳು! ಇದನ್ನು ಸಾಮಾನ್ಯವಾಗಿ ಅಪರಾಹ್ನದ ಕೊನೆಯ ಪ್ರದರ್ಶನವಾಗಿ ಸಾಯಂಕಾಲದ ಮೊದಲ ಪ್ರದರ್ಶನವಾಗಿ ಇಡುತ್ತಿದ್ದ ನೆನಪು.

ಕಾರಣ - ಕೆಳಗಿನ ಸುರಕ್ಷತೆ ಬಲೆ (ಸೇಫ್ಟಿ ನೆಟ್) ತೆಗೆದು ಕಟ್ಟಲು ಸಮಯ ಹಿಡಿಯುತ್ತೆ, ಹಾಗಾಗಿ ಈ ಹೊಂದಾಣಿಕೆ. "Cirque du soleil" ಯ ವಿಶೇಷ ವೆಂದರೆ ಇದೇ! ಆದರೆ ಇಲ್ಲಿ ಸುರಕ್ಷತೆ ಬಲೆ ಇಲ್ಲ, ಬದಲಿಗೆ ಈಜು ಕೊಳ! ಒಂದು ರಂಗಸ್ಥಳವನ್ನು ಈಜುಗೊಳ ಮಾಡುತ್ತಾರೆ, ತದನಂತರ ಈಜುಕೊಳ ನೀರು ಹೋಗಿ ಪುನಃ ರಂಗಸ್ಥಳವಾಗುತ್ತೆ. ಕಲಾವಿದರು "trapeze" ಪಲ್ಟಿಗಳನ್ನು ಹೊಡೆದು, ಅಷ್ಟೊಂದು ಎತ್ತರದಿಂದ ನೀರಿಗೆ ಧುಮುಕಿ, ಕೆಲವೊಮ್ಮೆ ರಂಗಮಂಟಪಕ್ಕೆ ಎದ್ದು ಬರುತ್ತಾರೆ, ಇಲ್ಲವೇ ಹಾಗೆ ನೀರಿನಲ್ಲಿ ಮುಳುಗಿ ಹೋಗುತ್ತಾರೆ. ಪ್ರತಿಯೊಬ್ಬ ಕಲಾವಿದನೂ, ಒಳ್ಳೆಯ "trapeze" ಪಟು, ಹಾಗೆಯೇ ಒಳ್ಳೆಯ ಈಜುಗಾರ, ಒಳ್ಳೆಯ ನೃತ್ಯಗಾರ! ರಂಗಸ್ಥಳದ ಮೇಲೆ ದೋಣಿ ಬಂದು ಬಿಡುತ್ತದೆ, ಕಾರಂಜಿ ಬರುತ್ತದೆ, ಇಲ್ಲವೇ ಇವೆಲ್ಲಾ ಮಾಯವಾಗಿ ಕಲಾವಿದರು ನೃತ್ಯ ಮಾಡುತ್ತಾರೆ. ಹಿಮ್ಮೇಳದಲ್ಲಿ ಸುಶ್ರಾವ್ಯವಾದ, ಅಬ್ಬರವಿಲ್ಲದ ಸಂಗೀತ - ಅದು ಕೂಡ ಸಂಗೀತ ಕಲಾವಿದರಿಂದ!

"O-Theater Bellagio" ಕೂಡ ವಿಹಂಗಮವಾಗಿದೆ. ರಂಗಸ್ಥಳ ಮಾರ್ಪಾಡ್ ಆಗುವ ರೀತಿ ಅದ್ಭುತ! ಇದನ್ನು ಯೂರೋಪಿನ ಒಪೇರಾ ಮಾದರಿ ನಿರ್ಮಿಸಿದ್ದಾರೆ. ಒಮ್ಮೆಲೇ 3600 ಜನ ಕುಳಿತು ನೋಡುವಷ್ಟು ದೊಡ್ಡದು ಈ ರಂಗ ಮಂದಿರ.
ಎರಡು ಗಂಟೆ ಕಳೆದು ಹೋದದ್ದೇ ಗೊತ್ತಾಗಲಿಲ್ಲ.

ರಂಗ ಮಂದಿರದಿಂದ ಆಚೆ ಬಂದತಕ್ಷಣವೇ, ಆ ಜೂಜುಕಾರರ ಅಡ್ಡೆ, ಅದೇ ಕೆಟ್ಟ ಬಾಂಗ್ ವಾಸನೆ, ಗೆದ್ದವರ ಕೇಕೆ, ಸೋತವರ ಚಡಪಡಿಕೆ! ಅದೆಷ್ಟೊ ಹಣ ಗೆದ್ದರೆ, ಕ್ಯಾಸಿನೊ ಹಣವನ್ನು ಮೂಟೆ ಮೂಟೆಯಲ್ಲಿ ತುಂಬಿ, ಲಿಮೋಸಿನ್ ಎಂಬ ಉದ್ದದ ಕಾರ್ ನಲ್ಲಿ, ಲಲನೆಯರ ಸಂಗಡ, ಒಂದು ಹಿಂಡು ದಾಂಡಿಗರ ಸರಹದ್ದಿನಲ್ಲಿ, ಗೆದ್ದವನನ್ನು ಬೀಳ್ಕೊಡುತ್ತಾರೆ ಎಂದು ಕೇಳಿದ್ದೆ, ನೋಡುವ ಭಾಗ್ಯ ಈ ಕಣ್ಣಿಗೆ ಸಿಕ್ಕಿತು!

ಇಲ್ಲಿನ ಮತ್ತೊಂದು ಸಾಂಸ್ಕೃತಿಕ ತಾಣವೆಂದ್ರೆ "Sphere". ಇದೊಂದು ಅದ್ಭುತ. ಗೋಲಾಕಾರದಲ್ಲಿ ನಿರ್ಮಿಸಲಾಗಿರುವ ಒಂದು ವೇದಿಕೆ. "Immersive Experience" ಅಂದರೆ ಮನೋಲ್ಲಾಸಗೊಳಿಸುವ ವೇದಿಕೆ. ಇದರ ಮೇಲ್ಛಾವಣಿ ಗೋಳಾಕಾರದಲ್ಲಿದ್ದು ಅದಕ್ಕೆ "LED" ಪರದೆಗಳನ್ನು ಅಳವಡಿಸಿದ್ದಾರೆ. ಒಳಾಂಗಣ "3D" ಆಗಿದ್ದು ಅದಕ್ಕೂ "LED" ಹೊಂದಿಸಿದ್ದಾರೆ. ವೇದಿಕೆಯಮೇಲೆ ಒಂದು ದೋಣಿ ಬಂತೆಂದರೆ, ಒಳಾಂಗಣದ ಚಿತ್ರಣ ತೇಲುತ್ತಿರುವ ಸಮುದ್ರವಾಗುತ್ತೆ, ವೇದಿಕೆ ದಟ್ಟಕಾಡಿನಲ್ಲಿ ಇರುವ ಸಣ್ಣ ಗುಡಿಸಿಲಾದ್ರೆ, ಒಳಾಂಗಣದ ಚಿತ್ರಣ ಅದಕ್ಕೆ ತಕ್ಕಂತೆ ಬದಲಾಗುತ್ತದೆ, ಪೂರಾ ವೇದಿಕೆ ಮರಳುಗಾಡಾಗಿ ಮಾರ್ಪಾಡಾಗಬಹುದು! ಇದಕ್ಕಾಗಿಯೇ ಸುಸರ್ಜಿತ ಕಂಡು ಕೇಳರಿಯದ ಧ್ವನಿ ವ್ಯವಸ್ಥೆ ಕಂಡುಹಿಡಿದಿದ್ದಾರೆ. ಪ್ರತಿಯೊಂದು ಆಸನಕ್ಕೂ ಒಂದೊಂದು ಧ್ವನಿ ವರ್ಧಕವಂತೆ, ಅದರ ಜೊತೆಗೆ ಬೇರೆ ಬೇರೆ ಆಯತಟ್ಟಿನಲ್ಲಿ ಧ್ವನಿ ವರ್ಧಕಗಳಂತೆ! "Sound Engineering" ಅನ್ನೋದು ನಮಗೆ ಅರಿವಿರದ ಅದ್ಭುತ ಲೋಕ, ಹೊರಾಂಗಣದಲ್ಲಿ ಧ್ವನಿ ವರ್ಧಕ ಹೊಂದಿಸುವುದು, ಒಳಾಂಗಣದಲ್ಲಿ ಹೊಂದಿಸುವುದು, ಪ್ರತಿಧ್ವನಿ ಇಲ್ಲದಂತೆ ನೋಡಿಕೊಳ್ಳುವುದು ಒಂದು ದೊಡ್ಡ ಕಲೆ, ಇವೆಲ್ಲವೂ "Sphere" ನಲ್ಲಿ ಬೇರೆಯದೇ ಲೋಕಕ್ಕೆ ಕೊಂಡೊಯುತ್ತದೆ ಎನ್ನುತ್ತಾರೆ ವೀಕ್ಷಕರು!



"Sphere" ನ ಹೊರಗಿನ ಪರದೆಗೂ, ಒಳಗೆ ನಡೆಯುವ ಕಾರ್ಯಕ್ರಮಕ್ಕೂ ಯಾವುದೇ ಹೊಂದಾಣಿಕೆ ಇರಬೇಕೆಂಬ ಕರಾರೇನಿಲ್ಲ. ಹೊರಗಿನ ಪರದೆ ಜಾಹಿರಾತುಗಳಿಗೆ ಮೀಸಲಿಡಬಹುದಾಗಿದೆ. ಮುಂದೆ ನಡೆಯುವ "F1" ಕಾರ್ ರೇಸ್ ನ ಪ್ರಸಾರ ಒಳಾಂಗಣ, ಹೊರಾಂಗಣ ಪರದೆಗಳ ಮೇಲೆ ಈ ರೇಸ್ ಬರುತ್ತದೆ ಎಂದು "ಆಕೆ" ಹೇಳಿದಳು!

"O-Theater Bellagio" ನಿಂದ ಆಚೆ ಬಂದಾಗ ರಾತ್ರಿ 11.30 ಉಬರ್ ಬುಕ್ ಮಾಡಿದಾಗ ನಮ್ಮನ್ನು ಕರೆದುಕೊಂಡು ಹೋಗಲು ಬಂದವಳು ವಲೆರಿ ಎಂಬ ಕಪ್ಪು ಹೆಂಗಸು. ನನಗೆ ಬೆಂಗಳೂರಿನ ಆಟೋ, ಉಬರ್ ಚಾಲಕರನ್ನು ಮಾತನಾಡಿಸೋದು ವಾಡಿಕೆ. ಅವರ ಹಿನ್ನಲೆ, ಅವರ ಜೀವನ ಕ್ರಮ, ಕಷ್ಟ, ಕಾರ್ಪಣ್ಯ ಇವೆಲ್ಲವೂ ಬಹಳಷ್ಟು ಜೀವನ ಪಾಠ ಕೊಟ್ಟಿದೆ ನನಗೆ. ಅಮೇರಿಕಾದಲ್ಲಿ, ಇವೆಲ್ಲವೂ ನಿಷಿದ್ಧ! ಅವರವರ ಬದುಕು, ಅವರವರದು, ಹಾಗಾಗಿ "Howdi" ಅಂತಲೋ "How are you?" ಅಂತಲೋ "Good evening" ಅಂತಲೋ ಅಂದು ನಮ್ಮ ಪಾಡಿಗೆ ನಾವು ಕುಳಿತಿಕೊಳ್ಳಬೇಕು! ಇದನ್ನು ಕಷ್ಟಪಟ್ಟು ನಾನು ಒಗ್ಗೂಡಿಸಿಕೊಂಡಿದ್ದೇನೆ! ಆದ್ರೆ ವಲೆರಿ ಮಾತಿಗಿಳಿದಳು. ಇದು ವಿರಳ.

ವಲೆರಿ: ನೀನು ಭಾರತದವನ?

ವಿನ್ಯಾ: ಹೌದು

ವಲೆರಿ: ಹಾಗಾದರೆ ನೀನು ನನ್ನ ಸಂಬಂಧಿ! ನನ್ನ ತಂದೆಯ ಜೊತೆ ಹುಟ್ಟಿದವರು 14 ಜನ. ನನ್ನ ಮನೆಯಲ್ಲಿ ಭಾರತದ, ರಷ್ಯಾದ, ಯೂರೋಪಿನ ಪ್ರಪಂಚದ ಎಲ್ಲಾ ದೇಶದ ಅಳಿಯಂದರು, ಸೊಸೆಯರಿದ್ದಾರೆ.

ನಮ್ಮದೊಂದು ವಸುದೈವ ಕುಟುಂಬ, ಹಾಗಾಗಿ ನೀನು ಕೂಡ ನನ್ನ ಸಂಬಂಧಿಯೇ!

ವಿನ್ಯಾ: ಇದು ನಿಜಕ್ಕೂ ಅಪರೂಪ

ವಲೆರಿ: ಹೌದು. Covid ನಿಂದಾಗಿ ಎಲ್ಲರಿಗೂ ತೊಂದರೆಯಾಯ್ತು. ಈ ಕಹಿನೆನಪಿನಿಂದ ಹೊರ ಬರಲು, ಹೋದವರ್ಷ ನಾವು ಮನೆಯವರೆಲ್ಲಾ ಇಲ್ಲೇ, ಲಾಸ್ ವೇಗಸ್ ನಲ್ಲಿ ಸೇರಿದ್ವು. ಇನ್ನೂರೈವತ್ತು ಜನ ಬಂದಿದ್ದರು. ಮನೆಯಲ್ಲೆಲ್ಲಾ ಜನ , ಮೊಬೈಲ್ ಪಕ್ಕಕ್ಕಿಟ್ಟು, ನೆಲದಮೇಲೆ ಜಮಖಾನ ಹಾಸಿಕೊಂಡು, ಎಲ್ಲರೂ ಹರಟೆ ಹೊಡೆದುಕೊಂಡು, ಮೂರು ದಿನ ಕಳೆದವು, ಅದೊಂದು ಅಪೂರ್ವ ಸಂಗಮ!

ವಿನ್ಯಾ: ವಲೆರಿ, ಮೊದಲಿಂದಲೂ ನೀನು ಉಬರ್ ಓಡಿಸಿಕೊಂಡು ಜೀವನ ಸಾಗಿಸುತ್ತಿದ್ದೀಯಾ?

ವಲೆರಿ: ಇಲ್ಲ. ನನ್ನ ತಂದೆ ಹಾಗು ತಾಯಿ ಇಬ್ಬರೂ ಶಿಕ್ಷಕರು. ಹಾಗಾಗಿ ನನಗೆ ಮೊದಲಿಂದಲೂ ಇದೇ ವೃತ್ತಿ ಮಾಡಬೇಕೆಂದಿತ್ತು. ಹಾಗಾಗಿ ನಾನು ಗ್ರಾಜುಯೇಷನ್ ಮುಗಿಸಿ ಶಿಕ್ಷಕಳಾದೆ. ನನಗೊಬ್ಬ ತಮ್ಮ. ಅವನಿಗೆ ಮೊದಲಿಂದಲೂ ಕಾಲು ಸ್ವಾಧೀನವಿಲ್ಲ. ಹಾಗಾಗಿ ನಾನು ಅವನನ್ನು ನೋಡಿಕೊಳ್ಳಲು ನಿಂತೆ. ಅವನೇ ನನ್ನ ಬದುಕು. ಈಗ ನನಗೆ ಐವತ್ತೊಂಭತ್ತು ವರ್ಷ. ಈಗ ಹತ್ತು ವರ್ಷಗಳ ಕೆಳಗೆ, ಅವನು ಓಡಾಡೋದು ನಿಲ್ಲಿಸಿದ. ಅವನಿಗೆ ಎಲ್ಲವನ್ನು ನಾನೇ ಮಾಡಿಸಬೇಕು, ಊಟ, ಸ್ನಾನ ಹೀಗೆ. ನನ್ನ ಶಾಲೆಗೇ ಹೋದ್ರೆ, ಇವನಿಗೆ ಕಷ್ಟ ಆಗೋದು, ಹಾಗಾಗಿ ಶಿಕ್ಷಕ ವೃತ್ತಿ ಬಿಟ್ಟು, ಉಬರ್ ಓಡಿಸುತ್ತಿದ್ದೀನಿ. ಬೇಕಾದಾಗಲೆಲ್ಲಾ ತಮ್ಮ ಫೋನ್ ಮಾಡ್ತಾನೆ, ಹೋಗಿ ನೋಡ್ತೀನಿ. ಇದು ನನ್ನ ಬದುಕು! ಈಗ ಸಾಯಂಕಾಲ ಫೋನ್ ಮಾಡ್ದ. ಹೋಗಿ ಅವನಿಗೆ ಸ್ನಾನ ಮಾಡ್ಸಿ, ರುಚಿಯಾದ ಅಡುಗೆ ಮಾಡಿ, ಊಟ ಮಾಡಿಸಿ ಹೊರಟೆ! ಮಧ್ಯದಲ್ಲಿ ಮೂರುಗಂಟೆ ಬಿಡುವು ತೆಗೆದುಕೊಂಡಿದ್ದರಿಂದ, ಈಗ ರಾತ್ರಿ ಮೂರರವರೆಗೆ ಕೆಲಸ ಮಾಡಿ ಹೊರಡುತ್ತೇನೆ ಎಂದಳು ವಲೆರಿ!

ನನ್ನ ಹೋಟೆಲ್ ಬಂತು. ನಾನು ಇಳಿಯುವಾಗ, "ನೀನು ಮಾಡುತ್ತಿರುವ ಕೆಲಸ ದೊಡ್ಡದು, ಬಹಳವೇ ಮನಸ್ಸಿಗೆ ಹಿಡಿಸಿತು, ಒಳ್ಳೆಯದಾಗಲಿ" ಎಂದೆ. ಆ ಮಹಾತಾಯಿ ಸುಂದರ ನಗೆಬೀರಿ ಹೊರಟಳು! ಒಂದೆಡೆ ಲಾಸ್ ವೇಗಸ್ ನಲ್ಲಿ ಒಂದು ಡಾಲರ್ ಗಾಗಿ ಸೆಲ್ಫಿಗೆ ಮುಖ ಕೊಡುವ ಅರೆ ಬೆತ್ತಲೆ ಹೆಣ್ಣುಗಳು, ಮತ್ತೊಂದೆಡೆ ಜೀವನವನ್ನು ತಮ್ಮನಿಗಾಗಿ ಮುಡಿಪಾಗಿಟ್ಟ ವಲೆರಿಯಂತಹ ಸುಮಂಗಲಿಯರು!

ಸೂರ್ಯೋದಯ ಅದ್ಭುತವಾಗಿ ಕಂಡಿತು. ಆಗತಾನೆ ರಾತ್ರಿಯ ಎಲ್ಲಾ ಪಾಪಗಳನ್ನು ಸಮುದ್ರದಲ್ಲಿ ತೊಳೆದು, ಹಸನಾಗಿ ಬಂದಂತಹ ಅನುಭವ! ಇದು ಲಾಸ್ ವೇಗಸ್!

ವಿನಾ: ಚಿನ್ನ-ಕೋಲು: ನಮ್ಮಲ್ಲಿ ರೆಕ್ಕೆ ಇಲ್ಲ ಪುಕ್ಕ ಇಲ್ಲ ಗರುಡಯ್ಯಂಗಾರಿ, ಅಂದ್ವಿಲ್ಲ ಚೆಂದ್ವಿಲ್ಲ ಚೆಲುವಯ್ಯಂಗಾರಿ ಅಂತ ಹೇಳ್ತಾರೆ. ವಲೆರಿ ಅಂದ್ರೆ ಲ್ಯಾಟಿನ್ ನಲ್ಲಿ "brave" "strong" ಎನ್ನುವ ಅರ್ಥವಂತೆ! ತಂದೆ ತಾಯಿ ಯೋಚಿಸಿ ಹೆಸರಿಟ್ಟಿರೋ ಏನೋ, ಆಕೆ ಹೆಸರಿಗೆ ಅನ್ವಯವಾಗಿ ಬದುಕುತ್ತಿದ್ದಾಳೆ! "Sphere" ಬಗ್ಗೆ ಕೂಡ ಹೇಳಿದ್ದು "ಆಕೆಯೇ"!

ನ್ಯೂ ಫೌಂಡ್ ಲ್ಯಾಂಡ್ & ಲ್ಯಾಬ್ರಡಾರ್ ೪೫೦೦ ಮೈಲಿ ರಸ್ತೆ ಪ್ರವಾಸ ಕಥನ

ಮಲ್ಲಿಕ್ ಪ್ರಸಾದ್, *ನ್ಯೂಜೆರ್ಸಿ*

ಭಾಗ ೧

ನನ್ನ ಬಾಲ್ಯದ ಮಿತ್ರ ಯೋಗೇಶ್ - ಯೋಗಿ ಅಮೇರಿಕಾ, ಕೆನಡಾ ಪ್ರವಾಸಕ್ಕೆ ಮುಹೂರ್ತ ಆರು ತಿಂಗಳ ಹಿಂದೆಯೇ ಇಟ್ಟಾಗಿತ್ತು, ಪಾಸ್ಪೋರ್ಟ್ ವೀಸಾ ಜೊತೆ ಅಂತರರಾಷ್ಟ್ರೀಯ ರಸ್ತೆ ಪರವಾನಗಿ (ಡ್ರೈವಿಂಗ್ ಲೈಸೆನ್ಸ್) ಮತ್ತು ಇನ್ಶೂರೆನ್ಸ್ ಎಲ್ಲಾ ಕೈ ಸೇರಿತ್ತು, ಜುಲೈ ಅರ್ಧ ಅಮೇರಿಕಾ ಈಸ್ಟ್ /ವೆಸ್ಟ್ ಕೋಸ್ಟ್ ಓಡಾಡಿ, ಕೆನಡಾ ರಸ್ತೆ ಪ್ರವಾಸಕ್ಕೆ ಜೂಲೈ ೧೪ ನಾಂದಿಯಾಯಿತು, ನಮ್ಮ ಗುರಿ - ಉತ್ತರ ಅಮೆರಿಕಾ ಖಂಡದ, ಕೆನಡಾ ದೇಶದ ತುತ್ತ ತುದಿಯ ಭೂ ಭಾಗ "ನ್ಯೂ ಫೌಂಡ್ ಲ್ಯಾಂಡ್ ದ್ವೀಪ ರಾಜ್ಯ" ಮುಟ್ಟುವುದಾಗಿತ್ತು ! ತುಂಬಾ ದೂರದ ರಸ್ತೆ, ಹೇಗೆ ಏನ್ನೋ ಯೋಚನೆಯೇ ಇಲ್ಲಾ... ಕಾರ್ ಇದೆ , ಕಾರ್ಡ್ ಇದೆ, ರಸ್ತೆ ತೋರಲು ಜಿ.ಪಿ.ಎಸ್ ಇದೆ, ಬೆಂಗಳೂರಿಂದ ತಂದಿದ್ದ ಕುರುಕು ತಿಂಡಿ ಇದೆ, ಕನ್ನಡ ಹಾಡು ಕೇಳಲು ಸ್ಪೀಟಿಫೈ ಇದೆ, ಮಾತಾಡಲು ರಸ್ತೆ ತುಂಬಾ ೨೫+ ವರುಷದ ಮಾತಿದೆ, ಇನ್ನೇನು ಬೇಕು... ೨೦ ದಿನ ರಸ್ತೆ ಪ್ರವಾಸತಾನೆ ? ೩,೦೦೦ ಮೈಲಿ ದೂರ ಅಷ್ಟೇ ತಾನೇ? ನಡಿ ಮಗಾ ನ್ಯೂ ಫೌಂಡ್ ಲ್ಯಾಂಡ್ ಹುಡುಕಿ, ನೋಡೇ ಬಿಡುವ ! ಎಂದು Hertz ಬಾಡಿಗೆ ಕಾರೊಂದಿಗೆ ನಾನು, ಯೋಗಿ ನಯಾಗರಾ ಜಲಪಾತದ ಸೊಬಗನ್ನು ನೋಡಲು ಜೂಲೈ ೧೪ರಂದು ಗಾಡಿ ಬಿಟ್ಟಿವು.

ದಿನ ೧ - ಅಮೆರಿಕಾ ಕಡೆಯಿಂದ ನಯಾಗರ ಬಗ್ಗೆ ನೋಡಿ, ಕೆನಡಾ ಪ್ರವೇಶಿಸಿದೆವು... ಇಬ್ಬರ ಪರವಾನಗಿ ನೋಡಿ ಎಷ್ಟು ದಿನದ ಪ್ರವಾಸ ಎಂದಷ್ಟೇ ಕೇಳಿ - "ಎಂಜಾಯ್ ಯುವರ್ ರೋಡ್ ಟ್ರಿಪ್ ಬಾಯ್ಸ್ - ವೆಲ್ಕಮ್ ಟು ಕೆನೆಡಾ" ಎಂದು ನಗು ಮೊಗದಿಂದ ಬಾರ್ಡರ್ ಸೆಕ್ಯೂರಿಟಿ ಬರ ಮಾಡಿದಿರು ! ಕಾರು ನಿಲ್ಲಿಸಿ, ಹೊನಲು ಬೆಳಿಗಿನಲ್ಲಿ ಮಿಂದ ನಯಾಗರ ನೋಡಿ ಅಲ್ಲೇ ತಂದಿದ್ದ ಬುತ್ತಿ ಮುಗಿಸಿದೆವು ಮತ್ತೆ ಬೆಳಿಗ್ಗೆ ಕಾಫೀ ವಿಥ್ ನಯಾಗರ ಡೇಟ್... "ಮೇಡ್ ಆಫ್ ದಿ ಮಿಸ್ಟ್" ಕೆಂಪು ಪಾಂಚೋ ಧರಿಸಿ ಅಮೆರಿಕಾ ಮತ್ತು ನಯಾಗರ ಜಲಪಾತಗಳ ರುದ್ರ ತಾಂಡವ ಹತ್ತಿರದಿಂದ ನೋಡಿ ಬೆರೆಗಾದೆವು!

೧. ಅಮೇರಿಕ ಫಾಲ್ಸ್ ಮತ್ತು ನಯಾಗರ ಫಾಲ್ಸ್ ಒಟ್ಟಿಗೆ ಕಾಣುವ ದೃಷ್ಟಿ ಬಿಂದು ಜಾಗದಿಂದ

೨. ಅಮೆರಿಕನ್ ಫಾಲ್ಸ್ ೩. ನಯಾಗರ ಫಾಲ್ಸ್

೪. ಕೆನಡಾ ದೇಶದಿಂದ ಮೆಯ್ಡ್ ಓಫ್ ಮಿಸ್ಟ್ ನೋಡಲು ಹೋದರೆ ಕೆಂಪು ಪಾಂಚೊ ದೊರೆಯುತ್ತದೆ (ಅಮೆರಿಕಾ ದೋಣಿ ನೀಲಿ ಪಾಂಚೊ ಕೊಡುತ್ತಾರೆ)

೫. ಬಹು ಉತ್ತಮ - ಕಾಪಿ ಡೇಟ್ ವಿಥ್ ನಯಾಗರ

ದಿನ ೨, ೩ - ಮುಂದಿನ ನಿಲ್ದಾಣ - ಬ್ರಾಂಪ್ಟಾನ್ ನಗರದಲ್ಲಿ ನೆಲೆಸಿದ್ದ ನನ್ನ ಪ್ರೌಢ ಶಾಲೆಯ ಗೆಳೆಯ ರವಿ ಮತ್ತು ಕುಟುಂಬದವರ ಜೊತೆ ಎರೆಡು ದಿನ ಸಮಯ ಕಳೆದು, ಟೊರಾಂಟೊ ಮಹಾನಗರ (ನ್ಯೂ ಯಾರ್ಕ್ ನ್ನೇ ಹೋಲುವ ನಗರ), ಡೌನ್ ಟೌನ್ ಸುತ್ತಿ... ಅಲ್ಲಿಯ ವಿಶೇಷವಾದ ರೋಜರ್ ಸ್ಟೇಡಿಯಂ, ಸಿ. ಯೆನ್. ಟವರ್ಸ್, ಟೊರೊಂಟೊ ಸ್ಕೈಲೈನ್, ಯೊಂಗ್ - ದುಂಡಾಸ್ ಚೌಕ ಅಡ್ಡಾಡಿ ಸವಿದೆವು.

ದಿನ ೪ - ಸೋಮವಾರ ಕೆನಡಾ ರಾಜಧಾನಿ ಒಟ್ಟಾವಾ ಕಡೆ ಪ್ರಯಾಣ ಮಾಡಿದೆವು,ಒಟ್ಟಾವ ನಗರದ ಹೊರವಲಯದ ರಿಚ್ಮಂಡ್ ರೋಡ್ 'ನಲ್ಲಿರುವ ಮಿತ್ರನ ಮನೆ, ಒಟ್ಟಾವಾ ನದಿಯ ವಿಹಂಗಮ ನೋಟದ ಅಪಾರ್ಟ್ಮೆಂಟ್ ಲ್ಲಿ ಮಿತ್ರ ಸುದರ್ಶನ್ ಅವರ ತಾಯಿಯ ಕೈ ಅಡುಗೆ, ಸೊಗಸಾದ ಊಟ, ಹರಟೆ, ಕಾಫಿಯಾದ ನಂತರ ಹೊರೆಟೆವು . ಕೆನಡಾದ ಕ್ಯಾಪಿಟಲ್ ನಗರ ಹಾಗು ರಾಜಕೀಯ ಕೇಂದ್ರ ಬಿಂದುವಾದ ಹೌಸ್ ಆಫ್ ಕಾಮನ್ಸ್, ವೆಸ್ಟ್ ಬ್ಲಾಕ್, ಸೆನೆಟ್ ಹೌಸ್ ಒಟ್ಟಾವ ನದಿಯ ದಡದಲ್ಲಿರುವ ಸುಂದರ ಆರ್ಕಿಟೆಕ್ಚರ್ ದೊಡ್ಡ ಕಟ್ಟಡ, ಒಟ್ಟಾವ ಪಾರ್ಲಿಮೆಂಟ್ ಹಿಲ್, ರಿಡೀಯು ಕೆನಾಲ್ ಸುತ್ತಾಡಿ, ಫೋಟೋ ಕ್ಲಿಕ್ಕಿಸಿ ... ಮಾಂಟ್ರಿಯಲ್ ನಗರಕ್ಕೆ ತೆರಳಿದೆವು.

೧. ಒಟ್ಟಾವ ಪಾರ್ಲಿಮೆಂಟ್ ಭವನ

೨. ಒಟ್ಟಾವ ಕಾನ್ಫೆಡರೇಶನ್ ಭವನ

೩ . ಒಟ್ಟಾವ ಫಲಕ

೪. ಸುಂದರ ಸಂಜೆ ನಡಿಗೆಗೆ ರೀಡೂ ಕೆನಾಲ್ (ಚಳಿಗಾಲದ ಡಿಸೆಂಬರ್ ರಜೆಗಳಲ್ಲಿ ರೀಡೂ ಕನಲ್ ಐಸ್ ಸ್ಕೇಟಿಂಗ್ ಮೋಜಿನ ಅವಕಾಶ ಕಲ್ಪಿಸಲಾಗುವುದು)

೫. ಒಟ್ಟಾವ ಪಾರ್ಲಿಮೆಂಟ್ ಬೆಟ್ಟದಿಂದ ಒಟ್ಟಾವ ನದಿಯ ಸುಂದರ ವಿಹಂಗಮ ದೊರಕುತ್ತದೆ

ದಿನ ೫ - ಮಾಂಟ್ರಿಯಲ್ ರಾಜ್ಯ , ಮಹಾನಗರ, ಫ್ರೆಂಚ್ ಕಾಲೋನಿ ಸುಂದರವಾದ ಡೌನ್ ಟೌನ್ ಸುತ್ತಿದೆವು. ಇಲ್ಲಿನ ಜನರ ಅಡು ಭಾಷೆ ಈಗಲೂ ಫ್ರೆಂಚ್, ಸ್ವಲ್ಪ ಇಂಗ್ಲಿಷ್ ನಡೆಯುತ್ತೆ. ೧೯೭೬ರಲ್ಲಿ ಮಾಂಟ್ರಿಯಲ್ ನಗರ ಒಲಿಂಪಿಕ್ಸ್ ನಗರವಾಗಿತ್ತು; ೧೯೭೬ರ ಆಟಗಳ ಸಡಗರ ಹೇಗಿತ್ತು ಎಂದು ಊಹಿಸುತ್ತಾ ಒಲಿಂಪಿಕ್ಸ್ ಪಾರ್ಕ್ ಸುತ್ತ ಮುತ್ತಾ ಓಡಾಡಿದ್ದು ಒಂದು ಅನುಭವವೇ. ಮೌಂಟ್ ರಾಯಲ್ ಮೇಲಿಂದ ಮಾಂಟ್ರಿಯಲ್ ವೀಕ್ಷಣೆ ಜಾಗ , ನೊಟ್ರೆ ಡೇಮ್ ಬೆಸಿಲಿಕಾ , ಸುಂದರ ಓಲ್ಡ್ ಪೋರ್ಟ್ ಏರಿಯಾ, ಪೋರ್ಟ್ ವಿಎಕ್ಸ್ - ಕೊಬ್ಬಲ್ ಸ್ಟೋನ್ ರಸ್ತೆಗಳು,... ಅಮೋಘ ! ಮಾಂಟ್ರಿಯಲ್ ನಗರ ಪ್ರದಕ್ಷಿಣೆ ಒಂದು ಅವಿಸ್ಮರಣೀಯ ಅನುಭವವೇ ಸರಿ.

೧. ಮಾಂಟ್ರಿಯಲ್ ೧೯೭೬ ಒಲಿಂಪಿಕ್ ಪಾರ್ಕ್ ... ಒಲಿಂಪಿಕ್ ಜ್ಯೋತಿ ಬೆಳಿಗಿಸಿದ್ದ ಜಾಗ

೨. ಸಂತ ಜೋಸೆಫ್ ಒರಟೊರಿ - ಮೌಂಟ್ ರಾಯಲ್

೩. ಪೋರ್ಟ್ ವಿಎಕ್ಸ್ ಡೇ ಮಾಂಟ್ರಿಯಲ್

೪. ಸಂತ ಲಾರೆನ್ಸ್ ನದಿಯ ಸಂಜೆ ನಡಿಗೆ ನೋಟ - ಉಕ್ಕಿನ ಚಕ್ರ

೫. ಮಾಂಟ್ರಿಯಲ್ ಡೌನ್ ಟೌನ್ ನೋಟ

೬. ಮಾಂಟ್ರಿಯಲ್ ಚಿಹ್ನೆ

ದಿನ ೬ - ಕ್ಯೂಬೆಕ್ 'ನ ಹೊರ ವಲಯಾದ ಮೊಂಟಿಮೋರೆನ್ಸಿ ಜಲಪಾತ (French: Chute Montmorency) ಒಂದು ಬೃಹತ್ ಜಲಪಾತ, ೨೭೨ ಅಡಿ ಎತ್ತರದಿಂದ ನೀರು ಧುಮ್ಮಿಕ್ಕುತ್ತದೆ, ನಯಾಗರ ಗಿಂತ ೯೯ ಅಡಿ ಎತ್ತರದ ಜಲಪಾತ ! ಜಲಪಾತದ ನೀರು ಹರಿದು ಬರುವ ಮಾರ್ಗದಲ್ಲಿ ಕಬ್ಬಿಣದ ಅದಿರು / ಅಂಶ ಇರುವದರಿಂದ ಮೊಂಟಿಮೋರೆನ್ಸಿ ಹಳದಿ ಬಣ್ಣದಿಂದ ಮಿಂಚುತ್ತಿತ್ತು. ಬೆಟ್ಟದ ಮೇಲಿಂದ ನೋಡಿದರೆ ಇತ್ತ ಬೃಹತ್ ಜಲಧಾರೆ ಅತ್ತ ಹರಿದು ಬಂದ ನೀರು ಬೃಹುತ್ ಸಂತ ಲಾರೆನ್ಸ್ ನದಿಗೆ ಸೇರಿಕೊಳ್ಳುವ ನೋಟ ಅಹಾ ನಯನ ಮನೋಹರ! ನೀರಿನ ಪಾತ್ರ ದೊಡನೆ ಬೆಟ್ಟ ಇಳಿಯೋದಕ್ಕೆ ಒಳ್ಳೆ ಪಾದಚಾರಿ ಮಾರ್ಗ ಮಾಡಿರುವದಿಂದ ಮೊಂಟಿಮೋರೆನ್ಸಿ ಜಲಪಾತದ ಸೌಂದರ್ಯ ಸವಿಯುವ ಒಂದು ಅವಕಾಶ ಉಪಯೋಗಿಸಿಕೊಂಡೆವು.

೧. ಮೊಂಟಿಮೋರೆನ್ಸಿ ಜಲಪಾತದ ಸುಂದರ ಮಧ್ಯಾಹ್ನದ ಬಿಸಿಲಿನ ನೋಟ

೨. ಮೊಂಟಿಮೋರೆನ್ಸಿ ಜಲಪಾತ ಸೇತುವೆ ದಾಟಿ ಇನ್ನೊಂದು ಬದಿಯ ನೋಟ

೩. ಮೊಂಟಿಮೋರೆನ್ಸಿ ಮೇಲಿಂದ ಕೆಳಗೆ ಬಗ್ಗಿ ನೋಡಿದಾಗ ಜಲಪಾತದ ನೀರು ಬೃಹತ್ ಸಂತ ಲಾರೆನ್ಸ್ ಸೇರುವ ದೃಶ್ಯ

ಪ್ರಖ್ಯಾತ ಹಳೆ ಕ್ಯುಬೆಕ್ ನಗರ (French: Vieux-Québec) UNESCO ವಿಶ್ವ ಪರಂಪರೆಯ ತಾಣ, ೧೬೦೮ರಲ್ಲಿ ಸ್ಯಾಮ್ಯುಯೆಲ್ ಡೇ ಚಾಂಪ್ಲೈನ್ ಹೊಸ ಫ್ರಾನ್ಸ್ 'ನ ರಾಜಧಾನಿಯಾಗಿ ಕ್ಯುಬೆಕ್ ಸ್ಥಾಪಿಸಿದ, ಸಂತ ಲಾರೆನ್ಸ್ ನದಿಯ ತೀರದ ಒಂದು ಬೃಹತ್ ಊರು ಕಟ್ಟಿ ಭದ್ರ ಪಡಿಸಿದ ಕೋಟೆ, ಬೆಟ್ಟದ ಸಣ್ಣ ಕೊಬ್ಬಲ್ಡ್ ರಸ್ತೆ ಗಳು, ಸುತ್ತ ಮುತ್ತ ಹಳೆ ಮನೆಗಳು, ಅಂಗಡಿ ಮುಂಗಟ್ಟುಗಳು ಹಾಗೆ ಉಳಿಸಿದ್ದಾರೆ, ನಮ್ಮಂತ ಪ್ರವಾಸಿಗರಿಗೆ ಆಕರ್ಷಣೆಯ ಬಿಂದುವಾಗಿದೆ. ಛಟೊ ಫ್ರಂಟ್ನಾಕ್ ಈಗ ಫೇರ್ ಮೊಂಟ್ ೭ ತಾರಾ ಹೋಟೆಲ್. ಅದೇ ಸಮಯದಲ್ಲಿ FEQ ಕ್ಯುಬೆಕ್'ನ ಬೇಸಿಗೆ ಹಬ್ಬ ನಡೀತಿತ್ತು, ಕ್ಯುಬೆಕ್ ನ ಛಾಪು ತುಂಬಾ ಸೊಗಸಾಗಿತ್ತು.

೧. ಹಳೇ ಕ್ಯುಬೆಕ್ ನಗರದ ಕೊಬ್ಬಲ್ಡ್ ಸ್ಟೋನ್ ಸಿಂಗರಿಸಿದ ಬೀದಿ

೨. ಸಂತ ಲಾರೆನ್ಸ್ ನದಿಯ ಬದಿ ಬೆಟ್ಟದ ಮೇಲೆ ಕಟ್ಟಿರುವ ಹಳೆ ಕ್ವಿಬೆಕ್ ನಗರದ ನೋಟ

೩. ಕ್ವಿಬೆಕ್ ರಾಜ್ಯದ ಪಾರ್ಲಿಮೆಂಟ್ ಭವನ

೪. ಅಮೋಘ ಛಟೊ ಫ್ರಂಟ್ನಾಕ್; ಈಗ ಫೇರ್ ಮೊಂಟ್ ೭ ತಾರಾ ಹೋಟೆಲ್ - ರಾತ್ರಿಯ ಹೊನಲು ಬೆಳಕಿನಲ್ಲಿ

೫. ಹಳೇ ಕ್ಯುಬೆಕ್ ನಗರದ ಇನ್ನೊಂದು ದೃಶ್ಯ

೬. ಫೆಸ್ಟಿವಲ್ ಡೇ ಕ್ಯುಬೆಕ್ - FEQ ಸುಂದರ ಗೋವರ್ನರ್ಸ್ ಮನೆಯ ಮುಂದೆ

೭. ಛಟೊ ಫ್ರಂಟ್ನಾಕ್ ಹೊರಾಂಗಣ ಮತ್ತು ಒಳಗೆ ನೋಡಲೇ ಬೇಕಾದ ಫ್ರೆಂಚ್ ವೈಭವದ ಕಟ್ಟಡ

ದಿನ ೭ - ನ್ಯೂ ಬ್ರುನ್ಸ್ವಿಕ್ ರಾಜ್ಯದ ಮೊಂಕ್ಟನ್ ಗುರುತ್ವಾಕರ್ಷಣೆಯ ಬೆಟ್ಟ - ಪ್ರಕೃತಿಯ ಗುರುತ್ವಾಕರ್ಷಣೆಯ ವಿನೂತನ ಜಾಗ - ಕಾರು ಅರ್ಧ ಬೆಟ್ಟ ಇಳಿಸಿ ನ್ಯೂಟ್ರಲ್ ಗೇರ್'ನಲ್ಲಿ ಬಿಟ್ಟು , ಬ್ರೇಕ್ ಇಂದ ಕಾಲು ತೆಗೆದರೆ ಹಾಗೆ ಇಳಿಜಾರಿನ ಮುಂದೆ ಹೋಗ ಬೇಕು ತಾನೇ?? ಆದರೆ ಮೊಂಕ್ಟನ್'ನ ಮ್ಯಾಗ್ನೆಟಿಕ್ ಹಿಲ್ಲಿನ ಈ ಜಗದಲ್ಲಿ ಕಾರು ಹಿಂದಕ್ಕೆ... ಬೆಟ್ಟದ ಮೇಲಕ್ಕೆ ಏರುತ್ತದೆ, ಬೆಟ್ಟ ಏರುತ್ತಾ ಏರುತ್ತಾ ವೇಗ ಕೂಡ ಹೆಚ್ಚುತ್ತದೆ !!! ಉಲ್ಟಾ ಗುರುತ್ವಾಕರ್ಷಣೆಯ ಈ ಮೋಜು ಮೂರೂ ನಾಲ್ಕು ಭಾರಿ ಮಾಡಿ "ಬೇ ಆಫ್ ಫಂಡಿ" ಕಡೆ ಧಾವಿಸಿದೆವು.

ದಿನ ೮ - ಪ್ರಿನ್ಸ್ ಎಡ್ವರ್ಡ್ ಐಲ್ಯಾಂಡ್ ೧೬೦೦ ರಲ್ಲಿ ಫ್ರಾನ್ಸ್ ಗೆ ಸೇರಿತ್ತು, ೧೭೬೩ರ ಯುದ್ಧದಲ್ಲಿ ಬ್ರಿಟಿಷರ ಪಾಲಾಯ್ತು. PEI ಚಾರ್ಲೋಟ್ಟ್ಸ್ ಟೌನ್ ಸೇರಲು ನಾರ್ತ್ ಬಲ್ಯಾಂಡ್ ಸ್ಟ್ರೈಟ್ಸ್ ದಾಟಲು ಏರುವ ಕಾನ್ಫೆಡರೇಶನ್ ಬ್ರಿಜ್ ತುಂಬಾ ವಿಶೇಷ, ಟ್ರಾನ್ಸ್ ಕೆನಡಾ ಹೈವೇ ಭಾಗವಾಗಿರುವ ೧೨.೯ km (೮ ಮೈಲಿ) ಉದ್ದದ ಕ್ಯಾಂಟಿಲಿವರ್ Curved ಸೇತುವೆ. PEI ತುಂಬಾ ಸುಂದರವಾದ ಸಣ್ಣ - ದೊಡ್ಡ ದ್ವೀಪ; ಸುಂದರ ಡೌನ್ ಟೌನ್ ಎಲ್ಲಾ ಬೇಕಾದ ಸೌಕರ್ಯದ ಜಾಗ, ವಿಸ್ತಾರವಾದ ಸುಂದರ ಕಡಲ ತೀರಗಳು. ಖ್ಯಾತ ಕವಿಯತ್ರಿ ಲೂಸಿ ಮಾಂಟ್ಗೊಮೆರಿ ಬೆಳೆದು ಹೆಸರು ಗಳಿಸಿದ ತಾಣ ಕೂಡ. ಲೂಸಿ ಬರೆದ "ಆನ್ ಒಫ್ ಗ್ರೀನ್ ಗೇಬಲ್ಸ್" ತುಂಬಾ ಪ್ರಸಿದ್ಧವಾದ ಪುಸ್ತಕ ಸರಣಿ, ಇದು ವಿಶ್ವದ ಹಲವಾರು ಭಾಷೆಗಳಿಗೆ ತರ್ಜಿಮೆಯಾಗಿದೆ. ಪುಸ್ತಕ ಓದಿದವರು ವಿಶ್ವದೆಲ್ಲಾ ಕಡೆಯಿಂದ "ಆನ್ ಯಾತ್ರೆ" ಮಾಡೋದಕ್ಕೆ PEIಗೆ ಬರ್ತಾರಂತೆ; ನಾನಂತೂ ಮೊದಲ ಬಾರಿಗೆ 'ಆನ್ ಆಫ್ ಗ್ರೀನ್ ಗೇಬಲ್ಸ್' ಪದ ಕೇಳಿದ್ದು.

ಸಮುದ್ರದ ಹೈ ಟೈಡ್ / ಲೊ ಟೈಡ್ ಒಂದು ಸಹಜ ಪ್ರಕ್ರಿಯೆ, ಪ್ರತಿ ದಿನ ಚಂದ್ರನ ಆಕರ್ಷಣೆಯ ಮೇರೆಗೆ ಸಮುದ್ರ ಉಕ್ಕುತ್ತದೆ (ಹೈ ಟೈಡ್) ಮತ್ತು ಆಕರ್ಷಣೆ ಕಮ್ಮಿಯಾದಾಗ (ಲೊ ಟೈಡ್) ಸಮುದ್ರದ ಮಟ್ಟ ಕಡಿಮೆಯಾಗುತ್ತದೆ . ಸಮುದ್ರದ ಎಲ್ಲಾ ಕಡೆ ಇದು ನಮ್ಮ ಗಮನಕ್ಕೆ ಬರುವುದಿಲ್ಲ ಯಾಕೆಂದರೆ ಉಕ್ಕುವುದು / ತಗ್ಗುವುದು ಸ್ವಲ್ಪ ಅಡಿಗಳ ವ್ಯತ್ಯಾಸ ಮಾತ್ರ.

"ಬೇ ಆಫ್ ಫಂಡಿ" ಯಲ್ಲಿ ಇದೇ ಹೈ ಟೈಡ್ / ಲೊ ಟೈಡ್ ಟೈಡಲ್ ಬೋರಿನಿಂದ ನೈಸರ್ಗಿಕ ವಿಸ್ಮಯ ಹೋಪ್ ವೆಲ್ಸ್ ರಾಕ್ಸ್ ಪಾರ್ಕಿನಲ್ಲಿ ಸೃಷ್ಟಿಯಾಗಿದೆ ! ಲೊ ಟೈಡ್ ಸಮಯದಲ್ಲಿ ಕಡಲಿನ ನೆಲದ ಮೇಲೆ ಮೈಲಿಗಟ್ಟಲೇ ನಡೆದಾಡಬಹುದು, ಕಡಲ ಹೊಟ್ಟೆಯಲ್ಲಿರುವ ವಿಸ್ಮಯಗಳನ್ನು ಬರಿಗಣ್ಣಲ್ಲೇ ನೋಡಬಹುದು ಕೂಡ, ಕೆಲವೇ ಸಮಯದಲ್ಲಿ ಮತ್ತೆ ಸಮುದ್ರ ಉಕ್ಕಿ ಬಿಡುತ್ತದೆ ಆಗ ಕಯಾಕಿಂಗ್'ಗೆ ಅವಕಾಶ (Walk on Ocean floor for miles, Bay of Fundy low tide /high tide; Vertical variance exceeds 50 feet (15 metres) Horizontal variance of an astonishing 3 miles (5 kilometres) exposing sea treasures fossils, sea glass and semi-precious stones on ocean floor)



೧. ಕೆನಡಾದ ಪೂರ್ವೋತ್ತರ ನಕ್ಷೆ ಚಂದ್ರಾಕಾರದ ದ್ವೀಪ - PEI ; ಕೆಳಿಗೆ ನೋವ ಸ್ಕೊಟಿಯಾ; ಕೊನೆ ದ್ವೀಪ NFL

೨. ಚಾರ್ಲೊಟ್ಟೆಸ್ ಟೌನಿನ ಸುಂದರ ಡೌನ್ ಟೌನ್

೩. PEIನ ದೊಡ್ಡ ಕರಾವಳಿಯ ಒಂದು ಸರಳ ಸುಂದರ ನೋಟ ...

ರಸ್ತೆ ಪ್ರವಾಸದಲ್ಲಿ ಮುಂಚಿತವಾಗಿ ಹೋಟೆಲ್ ಕಾಯ್ದಿರಿಸಲು ಕಷ್ಟ... ಮುಂದಿನ ಊರು /ತಂಗುದಾಣ ಯಾವುದು ಎಂದು ಗೊತ್ತಿರುವುದಿಲ್ಲ, ಕತ್ತಲಾಗುತಿದ್ದರೆ ಹತ್ತಿರದ ಹೋಟೆಲ್/ಮೋಟೆಲ್ ಹುಡುಕ ಬೇಕು, ಇಲ್ಲದಿದ್ದರೆ ಕಾರೇ ಗತಿ. ಜೂಲೈ ೨೧, PEI ಬಂದು ಸೇರಿದೆವು, ಚಾರ್ಲೋಟ್ಸ್ ಟೌನ್ ದೊಡ್ಡ ಪಟ್ಟಣವೇ ಸರಿ ಬೇಸಿಗಿ ಜನಸ್ತೋಮಕ್ಕೆ ಸೌಕರ್ಯಗಳು ಕಡಿಮೆ ಎಲ್ಲಾ ಹೋಟೆಲ್ ಹೌಸ್-ಫುಲ್ ಬೋರ್ಡ್ ಹಾಕಿದ್ದರು. ಗಾಳಿ ಸುದ್ದಿಯ ಮೇರೆಗೆ, ಒಂದು ಮನೆ ಬಾಗಿಲು ತಟ್ಟಿದೆ... ನೀವು ಮನೆಯಲ್ಲಿ ರೂಮ್ ರಾತ್ರಿ ಬಾಡಿಗೆ ಕೊಡ್ತೀರಂತೆ ಹೌದಾ??? ಚೀನಿ ಅಜ್ಜ ಅಜ್ಜಿ ಬಾಗಿಲು ತೆಗೆದು ಸಣ್ಣ ನಗುವಿನೊಡನೆ ನಮಗೆ ಇಂಗ್ಲಿಷ್ ಬರೋದಿಲ್ಲಾ (No english) ಎಂದ ಅಜ್ಜ !

ಏನಪ್ಪಾ ಇದು ಪಜೀತಿ, ಸಂಜೆ ೫ ಆಗಿದೆ ಸ್ವಲ್ಪ ಹೊತ್ತಲ್ಲಿ ಕತ್ತಲಾಗಲಿದೆ, ಗುಡುಗು ಸಹಿತ ಮಳೆ ಬರುವ ಮುನ್ಸೂಚನೆ ಇದೆ, ಮಿಂಚು ಬೀಳುವಾಗ ರಾತ್ರಿ ಕಾರಲ್ಲಿ ಮಲಗಿದ್ದರೆ ರೋಸ್ಟ್ ಆಗ್ತೀವಾ? ಯಾರು ನಮಗೆ ಇಂಗ್ಲಿಷ್ - ಮ್ಯಾಂಡರಿನ್ ಬಾಷೆ ಅನುವಾದ ಮಾಡಬಹುದು? ರಾತ್ರಿ ಕಳೆಯಲು ಇನ್ನೆಲ್ಲಿ ಹುಡುಕಿ ಕೊಂಡು ಹೋಗೋಣ? ಏನ್ಮಾಡೋದು ಈಗ? ಹೀಗೆ ಹತ್ತು ಹಲವಾರು ಪ್ರಶ್ನೆಗಳು ಒಮ್ಮೆಲೇ ತಲೆಯಲ್ಲಿ ಓಡ್ತಿತ್ತು...

ಮುಂದೇನಾಯ್ತು, ರಾತ್ರಿ ತಂಗುದಾಣ ಸಿಕ್ಕಿತೇ? ನ್ಯೂ ಫೌಂಡ್ ಲ್ಯಾಂಡ್ ತಲುಪುವ ರೋಚಕ ಭಾಗ ೨ ಮುಂದಿನ ಬೃಂದಾವನ ವಾಣಿಯಲ್ಲಿ ಪ್ರಸ್ತುತ ಪಡಿಸುವೆ...

ನಿಮ್ಮ ಮಲ್ಲಿಕ್ ಪ್ರಸಾದ್

ಕವನಗಳು

ಶ್ರಾವಣ ಸಂಧ್ಯಾ

ಕಾಯುವುದೊಂದೇ ಉಳಿದಿರುವುದು

ಎಂ.ವಿ. ಶಶಿಭೂಷಣ ರಾಜು, *ಪೆನ್ಸಿಲ್ವೇನಿಯ*

ಮಿಡುಕಾಡುತಿದೆ ಮನ
ಅಡ್ಡಗೋಡೆಯ ಮೇಲಿಟ್ಟ ದೀಪದಂತಹ ಮಾತಿನಿಂದ
ಅಲ್ಲೂ ಸಲ್ಲದೆ, ಇಲ್ಲೂ ಸಲ್ಲದೆ
ಎಡತಾಕಿ, ಕಾಲದೂಕುವ ಪರಿಗೆ

ಅರಿತವರ ಮೌನ ಅಸಹನೀಯವಾದರೂ
ಸಹಿಸಲು ಕಲಿತಾಗಿದೆ
ತನ್ನವರೊಡನೆ ದ್ವೀಪಕಟ್ಟಿಕೊಂಡ ಪರಿಗೆ
ಎದೆ ತೆರೆತಾಗಿದೆ

ಯಾರಿಗೂ ತೆರೆಯಲ್ಲೊಲ್ಲದ ಕದ
ಯಾರನೂ ನಂಬಲೊಲ್ಲದ ಮನ
ದುಗುಡಕೊಂಡು, ಭಯ ತುಂಬಿದ ಕಣ್ಣಲಿ
ಮೌನ ಮೆರವಣಿಗೆ ನಡೆಸಿ
ಸೆಣಸಾಡಿದೆ

ಎಲ್ಲಿ ಹೋದರು ಮಹರ್ಷಿಗಳು
ಎಲ್ಲಿ ಹೋದವು ಅವತಾರಗಳು
ಎಲ್ಲಾಯಿತು ಸಂಭವಾಮಿ ಯುಗೇ ಯುಗೆ
ಎಲ್ಲಿಹೋದವು ರಾಜರಧಿಕಾರಕೆ, ರಾಜಯೋಗಕೆ, ರಾಜಕಾಣಿಕೆಗೆ
ದಿಕ್ಕರಿಸುವ ಮನಗಳು

ಆಶಾವಾದವಿದೆ, ಆಕಾಶ ಬೋರ್ಗರೆದರೂ,
ಸುರಂಗಕೊನೆಯ ಬೆಳಕಿಗೆ
ಯಾರೋ ಸುಳಿದು ಸಲುಹುವ ಪರಿಗೆ
ಇಂದಲ್ಲದಿದ್ದರೂ ಮುಂದೆ
ಇಲ್ಲಲ್ಲದಿದ್ದರೂ ಅಲ್ಲಿ
ಅವತರಿಸುವ ಸುಖಕೆ
ಕಾಯುವುದೊಂದೇ ಉಳಿದಿರುವುದು

ಸಾವಿತ್ರಿ ರಾವ್

ಕಳೆದ ದಿನಗಳು

ಕಳೆದ ದಿನಗಳ ನೆನಪಿನ ಸುರುಳಿಗಳು
ನೋವು ನಲಿವಿನ ಸಂಗಮ
ಒಳಿತು ಕೆಡಕುಗಳ ಮಿಶ್ರಣ
ಮುಪ್ಪಿನಲಿ ಮುತ್ತಿರುವ ಗತ ಚಿತ್ರಣ

ಬಾಲ್ಯ ಅದಕ್ಕಿಲ್ಲ ಸಾಮ್ಯ
ಪಾಪ ಪುಣ್ಯವರಿಯದ
ಮುಗ್ಧಮನಸಿನಲಿ
ಅಂಜಿಕೆ, ಶಂಕೆ ಇಲ್ಲದೆ
ಸ್ವಚಂದ ಹಕ್ಕಿಯಂತೆ
ಹಾರಿಕುಣಿದು ತುಂಟಾಟದಲಿ
ಕಳೆದ ಸುಂದರ ಸಮಯ

ಅರಿವಿಲ್ಲದೆ ಆವರಿಸಿದ ಯೌ ವ್ವನ
ರಚಿಸಿತ್ತು ವರ್ಣಮಯ
ಕನಸುಗಳ ಚಿತ್ತಾರ
ಎಲ್ಲ ಅನುಭವಿಸುವ ಹಂಬಲ
ಸತಿಸಂತಾನದ ವ್ಯಾಮೋಹ
ಹೊನ್ನು ಮಣ್ಣಿನ ದಾಹ
ಕಂಗೆಡಿಸಿತ್ತು ಕಲ್ಪನೆಯ
ಸುಖ ಸಾಮ್ರಾಜ್ಯ

ಸೊರಗಿದ ತಾರುಣ್ಯ
ಮಾಡಿತ್ತು ಮುಪ್ಪಿಗಾಹ್ವಾನ
ವಿದೇಶ ಸೇರಿದ ಮಕ್ಕಳು
ಮರೆಯಾದ ಮಡದಿ
ಉಳಿಸಿದ್ದು ಬ್ಯಾಂಕ್ ಲಾಕರನಲ್ಲಿ
ಬಂಧುಬಳಗ ದೂರವಾಣಿ ಸಂಕರ್ಪದಲ್ಲಿ

ನಾನು ಒಂಟಿಯೆಲ್ಲ ಎಂದು
ಅರಿವಾಗಿದೆ ನನಗೆ
ಯಾರಿಗೆ ಯಾರೂ ಇಲ್ಲ
ಯಾರನ್ನೂ ನಂಬಿ
ಭೂಮಿಗೆ ಬಂದಿಲ್ಲ
ಎಲ್ಲರೊಳಗಿದ್ದು ಸಂರಕ್ಷಿಸುವ
ಸ್ವಾಮಿಯೇ ನನಗೆ ರಕ್ಷೆಯೆಂದು.

- ಸಾವಿತ್ರಿ ರಾವ್

ಏಕೆ?

ಎಂ.ವಿ. ಶಶಿಭೂಷಣ ರಾಜು, *ಪೆನ್ಸಿಲ್ವೇನಿಯ*

ಹುಡುಕುವುದೇ ಹೇಗೆ
ಆಳದಲೆಲ್ಲೋ ಅಡಗಿರುವ ಭಾವವ
ನದಿಯ ಸುಳಿಯಂತೆ
ಸುತ್ತುತ್ತಿರುವ ಜಾಗವ

ಬಾಲ್ಯದ ಅಜ್ಞಾನದಲಿ
ಗಗನಮುಟ್ಟುವ ಹರುಷ
ಬೆಳೆದು ತಳೆದ ಜ್ಞಾನದಲಿ
ಕಳೆದುಹೋಗುವುದೇಕೆ?

ಕೈ ಹಿಡಿದು ಜೊತೆಯಲಿ ಆಡಿದ
ಎಳೆಯ ಮನಸುಗಳು
ಬೆಳೆದೆದ್ದಮೇಲೆ
ಕೈ ಮಿಲಾಯಿಸುವುದು ಏಕೆ?

ದೂರದಲ್ಲೆಲ್ಲೂ ಇರುವವರ
ಯಶಸ್ಸಿಗೆ ವಿಸ್ಮಯ ಪಡುವ ಮನ
ಸನಿಹದಲಿರುವವರ ಉತ್ತುಂಗುವ
ಸಹಿಸಲಾರದೇಕೆ?

ಸುತ್ತಲೂ ಸುಖ ಎಡತಾಕಿದರೂ
ಸುಖಿಸದ ಮನ
ಅಸ್ತಿತ್ವವಿಲ್ಲದ ಜಗವ
ಹುಡುಕುವುದೇಕೆ?

ಗಗನ,ಭೂಮಿ, ಬೆಂಕಿ,ನೀರು ಗಾಳಿಯಲ್ಲಿನ
ಮೌನಕೆ ಶರಣಾಗದೆ
ಎದೆಯೊಳಗೆ ಒಣಗದ್ವಲ
ಎಬ್ಬಿಸುವುದೇಕೆ?

ಹಾಸ್ಯಾಭಿಪ್ರಾಯ

ಶ್ರಾವಣ ಸಂಧ್ಯಾ

ಅಮೇರಿಕಾಯಣ -೧

ಎಂ.ವಿ. ಶಶಿಭೂಷಣ ರಾಜು , ಪೆನ್ಸಿಲ್ವೇನಿಯ



ಕೇಟ್ ಮೊನ್ನೆ ಮನೆಗೆ ಬಂದಿದ್ದಳು, ಹಿಂದಿನ ಗೆಲುವು ಮುಖದಲ್ಲಿ ಇರಲಿಲ್ಲ. ತಪ್ಪು ಮಾಡಿದ ಭಾವನೆ.

"ಏನಾಯಿತು?" ಎಂದೆ

"ನಾನು ಚಾರ್ಲ್ಸ್ ಅನ್ನು ಬಿಟ್ಟು ತಪ್ಪು ಮಾಡಿದೆ. ಬಾಬ್ ಜೊತೆ ಸೇರಿದೆ, ಆದರೆ ಬಾಬ್ ಜೊತೆ ಅಡ್ಜಸ್ಟ್ ಆಗುತ್ತಿಲ್ಲ. ಚಾರ್ಲ್ಸ್ ತುಂಬಾ ಒಳ್ಳೆಯನು, ಸ್ವಲ್ಪ ಸಿಡುಕ, ಅಷ್ಟಕ್ಕೇ ಬಿಟ್ಟು ಹೋಗಬಾರದಿತ್ತು" ಎಂದಳು.

"ಚಾರ್ಲ್ಸ್ ಇನ್ನೂ ಒಂಟಿ, ಹೋಗಿ ಕೇಳು, ಮತ್ತೆ ಜೊತೆಯಾಗೋಣ ಎಂದು" ಎಂದೆ

"ಅವನು ಒಪ್ಪುವನಾ?"

"ನಿನ್ನ ಕಣ್ಣಲ್ಲಿ ನಿಜಾಯಿತಿ ಇದ್ದರೆ, ನೀನು ಕೇಳುವ ಕ್ಷಮಾಪಣೆ ನಿಜವೇ ಆಗಿದ್ದರೆ, ಅವನು ಒಪ್ಪಿಯೇ ಒಪ್ಪುತ್ತಾನೆ. ನಿಜಾಯಿತಿಯಿಂದ ಕ್ಷಮಾಪಣೆ ಕೇಳೋರನ್ನು ಕ್ಷಮಿಸದೇ ಇರುವವರು ಇಲ್ಲವೇ ಇಲ್ಲ ಎಂಬಷ್ಟು ಕಡಿಮೆ" ನಾನೆಂದೆ.

ಎರಡು ವಾರ ಆದಮೇಲೆ ನಿನ್ನೆ, ಕೇಟ್, ಚಾರ್ಲ್ಸ್ ಜೊತೆ ಬಂದು "ಥ್ಯಾಂಕ್ಸ್ " ಹೇಳಿ ಹೋದಳು.

ಅಮೇರಿಕಾಯಣ -2

ಎಂ.ವಿ. ಶಶಿಭೂಷಣ ರಾಜು , ಪೆನ್ಸಿಲ್ವೇನಿಯ



"ನೀನು ಆ ಕಪ್ಪು ಹುಡುಗನನ್ನು ಮದುವೆ ಆದರೆ ನಿನ್ನ ಮಕ್ಕಳು ಕಪ್ಪಾಗಿ ಹುಟ್ಟುತ್ತಾರೆ" ಅಮ್ಮ ಜೆನ್ನಿಫರ್ ಹೇಳಿದ ಮಾತಿಗೆ, ಲಿಂಡಾ ನಗುತ್ತಾ,

"ಕಪ್ಪು ಹುಡುಗನ ಜೊತೆ ಇರುವುದನ್ನು ಒಪ್ಪಿಕೊಂಡಮೇಲೆ, ಕಪ್ಪು ಮಕ್ಕಳನ್ನು ಒಪ್ಪಿಕೊಳ್ಳುವುದು ಸುಲಭ" ಎಂದಳು.

" ಹಾಳಾಗಿ ಹೋಗು, ನಮ್ಮ ಮಾತು ಹೇಗೋ ಕೇಳುವುದಿಲ್ಲವಲ್ಲ ನೀನು! "

ಲಿಂಡಾ ಮದುವೆ ಆಗಿ, ಐದು ವರುಷವಾಯಿತು. ಲಿಂಡಾ ಆಗಾಗ ಅಮ್ಮನ ಮನೆಗೆ ಒಂಟಿಯಾಗಿ ಹೋಗುತ್ತಿದ್ದಳು.

ಒಂದು ದಿನ ಜೆನ್ನಿಫರ್ ಏದೆ ನೋವು ಬಂದು ಕುಸಿದಳು, ಹತ್ತಿರದಲ್ಲಿರುವ ಅಬಿಂಗ್ ಟನ್ ಆಸ್ಪತ್ರೆಗೆ ಸಾಗಿಸಿದರು.

ಆಸ್ಪತ್ರೆ ಬೆಡ್ ಮೇಲೆ ಮಲಗಿದ್ದ ಜೆನ್ನಿಫರ್ ಹತ್ತಿರಬಂದ ಆ ಕಪ್ಪು ಡಾಕ್ಟರ್ " ಏನೂ ಹೆದರಬೇಡಿ ನಾವೆಲ್ಲಾ ನೋಡಿಕೊಳ್ಳುತೇವೆ' ಎಂದ ಪ್ರೀತಿಯಿಂದ . ಜೆನ್ನಿಫರ್ ತನ್ನ ಅಳಿಯನನ್ನು ನೋಡಿ ಧೈರ್ಯ ತಂದುಕೊಂಡಳು.

"ನಾನು ಟ್ರೀಟ್ ಮಾಡಬಹುದಾ, ಇಲ್ಲ ಬಿಳಿ ಡಾಕ್ಟರ್ ಬೇಕಾ, ಸರ್ಜರಿ ಮಾಡಬೇಕಾಗಿ ಬಂದರೆ ಬಿಳಿ ದಾನಿಯಿಂದ ಪಡೆದ ರಕ್ತ ತರಿಸಬಲ್ಲೆ"ಎಂದ ನಗುತ್ತ.

ಅವನ ಮಾತಲ್ಲಿ ಅವಮಾನ, ತಿರಸ್ಕಾರ ಇರಲಿಲ್ಲ, ಹಸನ್ಮುಖಿಯಾಗಿದ್ದ.

ನಾಚಿಕೆಯಿಂದ ಕುಗ್ಗಿಹೋದ ಜೆನ್ನಿಫರ್, ಅವನ ಕೈಹಿಡಿದು ಅದುಮಿದಳು.

ಭಾರತದಲ್ಲಿ ಹಾಗು ಎಲ್ಲಾ ದೇಶಗಳಲ್ಲಿ ಇರುವ ಜಾತಿ, ಧರ್ಮ, ಜನಾಂಗೀಯ ತಾರತಮ್ಯಕ್ಕೆ ಉತ್ತರ ಸಿಗಬಹುದೇ?

ಅಮೇರಿಕಾಯಣ -3

ಎಂ.ವಿ. ಶಶಿಭೂಷಣ ರಾಜು , ಪೆನ್ಸಿಲ್ವೇನಿಯ

ಮೊನ್ನೆ ಸಾಯಂಕಾಲ ಸ್ಕಾಟ್ ಮನೆಗೆ ಬಂದು " ನಿನ್ನ ಪುಸ್ತಕ I See You ದಲ್ಲಿನ ಕವನಗಳನ್ನು ಓದಿದೆ. ದೇವರು ನೋಡುತ್ತಿರುತ್ತಾನೆ ಎಂದು ಬರೆದಿರುವೆ ಆದರೆ ರಕ್ಷಿಸುತ್ತಾನೆ ಎಂದು ಬರೆದಿಲ್ಲವಲ್ಲ' ಎಂದು ಕ್ಯಾತೆ ತೆಗೆದ.

" ಆಟವಾಡುತ್ತಿರುವ ಮಕ್ಕಳನ್ನು ಅಮ್ಮ ನೋಡುತ್ತಿದ್ದಾಳೆ ಎಂದರೆ ಬರೀ ನೋಡುತ್ತಿದ್ದಾಳೆ ಎಂದು ಅರ್ಥವೇ, ಅವರು ಬೀಳುವ ಮುಂಚೆಯೇ ಹೋಗಿ ಹಿಡಿಯುವುದಿಲ್ಲವೇ?. ದೇವರು ಸೃಷ್ಟಿಕರ್ತ ಎಂದರೆ, ಅಮ್ಮನ ಸ್ವಭಾವವೂ ಇದೆ ಅಂದು ಅರ್ಥ, ಮಾತೃಹೃದಯ ಇದ್ದವರಿಗೆ ಮಾತ್ರ ಸೃಷ್ಟಿ ಮಾಡಲು ಸಾಧ್ಯ?

"ಅಂದರೆ ದೇವರು ಹೆಣ್ಣಾ" ಬಾಬ್ ಎಂದ

" ಇರಬಹದು" ನಾನೆಂದೆ.

ಕ್ಯಾಮೆರಾ ಕಣ್ಣು

ಶ್ರಾವಣ ಸಂಧ್ಯಾ

Iguazu ಫಾಲ್ಸ್ - ಚಂದ್ರನ ಬೆಳಕಲಿ

ರಾಜೀವ್ ದೊಡ್ಡಬಳ್ಳಾಪುರ

ಬ್ಯಾನ್ಫ್ ನ್ಯಾಷನಲ್ ಪಾರ್ಕ್

ರಾಜೀವ್ ದೊಡ್ಡಬಳ್ಳಾಪುರ

ಚಿನ್ನರ ಮುತ್ತುಗಳು

ಶ್ರಾವಣಿ ಸಂಧ್ಯಾ

ದಿಯಾ ರಜನೀಶ, *ನ್ಯೂಜೆರ್ಸಿ*

ದಿಯಾ ರಜನೀಶ, *ನ್ಯೂಜೆರ್ಸಿ*

ದಿಯಾ ರಜನೀಶ, *ನ್ಯೂಜೆರ್ಸಿ*

ಚಿತ್ರ ಕಲೆ

ಪವಿತ್ರ ರಾಜೀವ್ , *ನ್ಯೂಜೆರ್ಸಿ*

ಧನ್ಯವಾದಗಳು

ಶ್ರಾವಣಿ ಸಂಧ್ಯಾ